
ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ಗುರುಭ್ಯೋ ನಮಃ

ಶ್ರೀಮದಾನಂದತೀರ್ಥವಿರಚಿತಂ

# ಶ್ರೀ ತಂತ್ರಸಾರಸಂಗ್ರಹಂ

## ಪರಿಚಯಾತ್ಮಕ ನಿರೂಪಣೆ




ಸಂಗ್ರಹ-ನಿರೂಪಣೆ

ಪ್ರೊ॥ ಬದರೀನಾಥಾಚಾರ್ಯ ಘೂಳೀ ಎಂ.ಎ.



ಮಾಧವ ಮಧ್ವ ಪ್ರಕಾಶನ

ಬೆಂಗಳೂರು

Srimadananda Thirtha Virachitham Shree Tantrasara Sangraham. Compiled and Edited by Prof. Badarinathacharya Ghooli M.A., Retired Professor. Published by Madhava Madhwa Prakashana No. 164, "Soudamini" 7th Cross, 9th Main, BEML Layout, Rajarajeshwarinagar, Bangalore-560 089 Phone : 080-28602191

First Edition : Jan. 2008

Typeset (DTP) By
**Sri Raghavendra Enterprises**
Banashankari I Stage,
Bangalore-560 050
Phone 080-22421294



## ಪ್ರಣಾಮದೊಂದಿಗೆ ಆದರದ ಅರ್ಪಣೆ

ನನ್ನ ಜ್ಯೇಷ್ಠ ಭ್ರಾತ ತಂದೆಯಂತೆ ಅಭಿಮಾನ, ಆಶೀರ್ವಾದ, ಪ್ರೋತ್ಸಾಹಗಳನ್ನು ಅನುಗಾಲದಿಂದಲೂ ನನ್ನ ಊರ್ಜಿತಕ್ಕೆ ಸಕಲ ರೀತಿಯಿಂದಲೂ ಕರುಣಿಸಿದ **ಪಂಡಿತ ಶ್ರೀ ಶ್ರೀನಿವಾಸಮೂರ್ತಿ ಆಚಾರ್ಯ ಘೂಳೀ B.Sc., B.E.** ನಿವೃತ್ತ ಪ್ರಮುಖ ರೈಲ್ವೆ ಇಂಜಿನಿಯರ್ ಇವರ ೮೦ನೇ ವರ್ಷದ ಜನ್ಮ ದಿನದಂದು ತಾರೀಖು ೨೧–೦೧–೨೦೦೮ ಸವಿನೆನಪಿಗಾಗಿ ಈ ಕೃತಿರತ್ನವನ್ನು ಅವರಿಗೆ ಅರ್ಪಿಸಿ ನಮ್ಮನ್ನು ಆಶೀರ್ವದಿಸಿದುದಲ್ಲದೆ ಅವರು ಶತಾಯುಷಿಗಳಾಗಿ ನಮ್ಮ ವಂಶಕ್ಕೆ ಅತ್ಯಂತ ಹಿರಿಯ ನಾಯಕರಾಗಿ ಮಾರ್ಗದರ್ಶನ ಆಶೀರ್ವದಿಸಲು ನಮ್ಮ ಕುಲಸ್ವಾಮಿ ಶ್ರೀ ಲಕ್ಷ್ಮೀವೆಂಕಟೇಶ, ಘೂಳೀ ಪ್ರಾಣೇಶ, ಶ್ರೀ ರಘೋತ್ತಮರ ಹಾಗೂ ಶ್ರೀ ರಾಘವೇಂದ್ರ ಗುರುರಾಜರು ಅನುಗ್ರಹಿಸಲಿ ಎಂದು ಸವಿನಯ ಪ್ರಾರ್ಥನೆ.

ಹಿರಿಯರಾದವರಿಗೆ ನಾನೇನು ಕಾಣಿಕೆಯಾಗಿ ಕೊಡಬಲ್ಲೆ. ಆದರೆ ಜ್ಞಾನಿಗಳಿಗೆ ಜ್ಞಾನದ ಒಂದು ಕುರುಹು ಅತಿ ಪ್ರೀತಿ ಎಂದು ತಿಳಿದು ಆಚಾರ್ಯ ಶ್ರೀಮಧ್ವರಿಂದ ರಚಿತವಾದ ಶ್ರೀ ತಂತ್ರಸಾರಸಂಗ್ರಹಂ ಎಂಬ ಕಿರು ಕೃತಿಯನ್ನು ನನ್ನಿಂದ ಶ್ರೀಹರಿ ಗುರುಗಳು ಅನುವಾದಿಸಿದುದನ್ನು ಭಕ್ತಿಪೂರ್ವಕ ಅರ್ಪಣೆ ಮಾಡುತ್ತಿದ್ದೇನೆ. ೨೭–೧೨–೧೯೯೭ ಹತ್ತು ವರ್ಷಗಳ ಹಿಂದೆ ನಮ್ಮ ಮಾತೃಸ್ಥಾನದಲ್ಲಿದ್ದ ಸೌ॥ ಪೂಜ್ಯ ಕೋಮಲ ಬಾಯ್ ನನ್ನ ಅಣ್ಣನೊಂದಿಗೆ ಭೀಮರತಿ ಶಾಂತಿಯ ಸಮಯದಲ್ಲಿ "ಅಣುಭಾಷ್ಯಂ" ಕನ್ನಡಾನುವಾದ ಕೃತಿಯನ್ನು ಅರ್ಪಿಸಿದ್ದೆ. ಆದರೆ ಈಗ ಶ್ರೀ ವೆಂಕಟೇಶನ ಸತ್ಯಸಂಕಲ್ಪದಂತೆ ಆ ಸಾತ್ವಿಕ ಶಿರೋಮಣಿ ಇಂದು ನಮ್ಮೊಂದಿಗಿಲ್ಲದೆ ದೌರ್ಭಾಗ್ಯರಾಗಿದ್ದೇವೆ. ಆದರೂ ನಮ್ಮ ಅಣ್ಣನವರು ನೂರು ವರ್ಷ ಕಾಲ ದೀರ್ಘ ಆಯುರಾರೋಗ್ಯದಿಂದ ನಮ್ಮ ಮಧ್ಯದಲ್ಲಿ ಇದ್ದು ಆಶೀರ್ವಾದ ಮಾಡುವುದಾಗಿ ಅವರಲ್ಲಿ ಬೇಡಿಕೊಳ್ಳುತ್ತೇನೆ.

ಇತಿ ಪ್ರೀತಿಯ ಸೋದರ

೨೦–೦೧–೨೦೦೮ **ಬದರಿನಾಥ ಘೂಳೀ**

ಶ್ರೀಹರಿ

# ಪ್ರಸ್ತಾವನೆ

ಶ್ರೀಮದಾಚಾರ್ಯರು ''ತಂತ್ರಸಾರ''ವೆಂಬ ಮೂಲಗ್ರಂಥದ ಸಂಗ್ರಹವನ್ನು ತಮ್ಮ ತಂತ್ರಸಾರ ಸಂಗ್ರಹವೆಂಬ ವಿಶಿಷ್ಟ ಕೃತಿಯನ್ನು ರಚಿಸಿರುತ್ತಾರೆ. ಈ ತಂತ್ರಸಾರವನ್ನು ಮೊಟ್ಟಮೊದಲಿಗೆ ಶ್ರೀಮಹಾವಿಷ್ಣುಕೃತವಾಗಿರುತ್ತೆಂಬುದನ್ನು ಶ್ರೀಮದಾಚಾರ್ಯರು **''ಆಹದೇವೋ ರಮೋತ್ಸಂಗ ವಿಲಸತ್ಪಾದ ಪಲ್ಲವಃ''** ಕೋಮಲ ಚರಣಗಳುಳ್ಳ ಕಮಲಾಕ್ಷನಾದ ಶ್ರೀಮನ್ನಾರಾಯಣನು ಆದಿಯಲ್ಲಿ ತನ್ನ ಜ್ಯೇಷ್ಠ ಮಗನಾದ ಚತುರ್ಮುಖ ಬ್ರಹ್ಮದೇವರಿಗೆ ಉಪದೇಶಿಸಿದನು ಎಂದು **ತಂತ್ರಸಾರ**ದ ಆಗತಿ ಕ್ರಮವನ್ನು ತಿಳಿಸುತ್ತಾರೆ. ಇದು ಬ್ರಹ್ಮದೇವರ ಹಾಗೂ ಶ್ರೀಹರಿಯ ಸಂವಾದ, ಪ್ರಶ್ನೆ ಉತ್ತರ ರೂಪವಾಗಿ ಇರುವುದೆಂದೂ ಸಹ ತಿಳಿಸುತ್ತಾರೆ. **''ಸರ್ಗಾದೌ ತೇನ ಪೃಷ್ಟೋಽಬ್ಜ ಲೋಚನಃ''** ಎಂದಿದ್ದಾರೆ.

ಇದು ತಂತ್ರಗಳಲ್ಲೆಲ್ಲಾ ಪ್ರಧಾನ. ಹೀಗಾಗಿ ಆಚಾರ್ಯ ಶ್ರೀಮಧ್ವರು ಭಾಗವತ ತಾತ್ಪರ್ಯದಲ್ಲಿ ವಿಶೇಷವಾಗಿ ಉದಾಹರಿಸಿರುವುದನ್ನು ಕಾಣಬಹುದು. ಹೀಗೆ ನಾಲ್ಕು ಅಧ್ಯಾಯಗಳಲ್ಲಿ ವಸ್ತುವಾಗಿ ರಚಿಸಲಾಗಿದೆ.

**ಪ್ರಥಮಾಧ್ಯಾಯ** : ಪ್ರಣವ ಅಷ್ಟಾಕ್ಷರದಲ್ಲಿ ಪ್ರತಿಪಾದ್ಯವಾದ ಭಗವನ್ಮೂರ್ತಿಗಳು **ಮಾತೃಕಾ, ಅಷ್ಟ ಮಹಾಮಂತ್ರಗಳು, ಪೂಜಾ ವಿಧಾನ, ಪೀಠಪೂಜೆ, ಆವರಣಪೂಜೆ** ಇವುಗಳ ವೈಶಿಷ್ಟ್ಯತೆ ಮಹತ್ವವು ವಿವರಿಸಲಾಗಿದೆ.

**ಎರಡನೇ ಅಧ್ಯಾಯ : ಮಾತೃಕಾನ್ಯಾಸ, ಪ್ರಾಣಾಯಾಮ, ಕಲಶದೇವತೆಗಳು, ಪೂಜಾಕ್ರಮ, ಹೋಮ, ವಿಧಿ ವಿಧಾನ** ಇವುಗಳನ್ನು ತಿಳಿಸಲಾಗಿದೆ.

**ಮೂರನೇ ಅಧ್ಯಾಯ : ದೇವತಾ ಪ್ರತಿಷ್ಠಾಪನೆ, ನಿಯಮವಿಧಿ, ಪ್ರತಿಮಾ ಲಕ್ಷಣ,** ಶಿಲಾಪರೀಕ್ಷೆ, ದೇವಾಲಯ ನಿರ್ಮಾಣ, ಉತ್ತಮ ಸ್ಥಳ, ವಾಸ್ತು ಪೂಜೆ, ಗರ್ಭಗೃಹ, ಅಂಕುರಾರ್ಪಣ, ಅಧಿವಾಸಗಳ ವಿವರ, ಚಕ್ರಾಬ್ಜ ಮಂಡಲ, ಭದ್ರಕಾ ಮಂಡಲ, ಅಭಿಷೇಕ, ಕಲಶಗಳ ವಿವರಣೆ, ಸಂತರ್ಪಣೆ, ಬ್ರಾಹ್ಮಣ ಋತ್ವಿಕರ ಪೂಜೆ, ದಕ್ಷಿಣೆ, **ತತ್ವಾನ್ಯಾಸಕ್ರಮ**ವೆಂಬುದನ್ನು ವಿವರವಾಗಿ ತಿಳಿಸಲಾಗಿದೆ.

**ನಾಲ್ಕನೇ ಅಧ್ಯಾಯ**ವಂತೂ ಒಂದು ಖಣಿ. ಅನೇಕ ಮಂತ್ರಗಳ ವಿವರಣೆ ಇದನ್ನು **ಮಂತ್ರಾಧ್ಯಾಯ**ವೆಂದೆ ಕರೆಯಲಾಗಿದೆ. ಸುಮಾರು ೨೩ ಮಂತ್ರಗಳು ಅವುಗಳ **ಧ್ಯೇಯ ಮಂತ್ರಗಳು, ಮಾತೃಕಾನ್ಯಾಸಕ್ರಮ, ಹೋಮವಿಧಾನ** ಹೀಗೆ ವಿವಿಧವಾಗಿ ವಿವರಣೆಯೊಂದಿಗೆ ತಿಳಿಸಿ ಮಂತ್ರಗಳ ಫಲಶೃತಿಯನ್ನು ತಿಳಿಸಿರುವುದು ಆಚಾರ್ಯರ ವೈಶಿಷ್ಟ್ಯತೆಯನ್ನು ಕಾಣಬಹುದು. **ಅಥ ವಿಷ್ಣೋದಿತೇ ತಂತ್ರಸಾರೇ ಮಂತ್ರಗಣೋ ಹಿ ಯಃ । ಉದಿತಃ ಸಂಗ್ರಹೇಣಾಸಾವುಚ್ಯತೇಽಖಿಲ ಸಾಧಕಃ ॥** ಈ ಮಂತ್ರವನ್ನು ಆಚಾರ್ಯರು ನಾಲ್ಕನೇ ಅಧ್ಯಾಯದ ಪ್ರಾರಂಭದಲ್ಲಿ ತಿಳಿಸಿರುತ್ತಾರೆ. ಅರ್ಥ : ಈಗ ಮಹಾವಿಷ್ಣು ತಿಳಿಸಿದ ತಂತ್ರಸಾರದಲ್ಲಿ ನಿರೂಪಿಸಿದಂತೆ ಸಕಲಾಭಿಷ್ಟಪ್ರದವಾದ ಮಂತ್ರಗುಂಪನ್ನು ಹೇಳುತ್ತೇವೆ.

ಮುಖ್ಯವಾಗಿ **ಪ್ರಾಣಾಯಾಮ ಅಷ್ಟಾಂಗ ಯೋಗಗಳು ಸುಷುಮ್ನಾನಾಡಿ** ಇತ್ಯಾದಿ ದೇಹದಲ್ಲಿರುವ ನಾಡಿಗಳು ಇಲ್ಲಿ ಕಾಣಬಹುದು.

ಈ ರೀತಿಯಾಗಿ ತಂತ್ರಸಾರ ಸಂಗ್ರಹವು ತಂತ್ರಶಾಸ್ತ್ರದ ವಿಶಿಷ್ಟ ರೀತಿಯಿಂದ ಒಂದು **ವಿಶ್ವಕೋಶ**ವೇ ಆಗಿರುತ್ತದೆ.

ತಂತ್ರಸಾರ ಸಂಗ್ರಹಕ್ಕೆ ಅನೇಕ ಮಹನೀಯರು ವ್ಯಾಖ್ಯಾನ ಬರೆದಿರುತ್ತಾರೆ. **ಶ್ರೀವ್ಯಾಸತೀರ್ಥರು, ಶ್ರೀವಾದಿರಾಜರು, ಶ್ರೀವೇದವೇದ್ಯರು, ಛಲಾರಿ ಶೇಷಾಚಾರ್ಯರು, ಶೇಷಚಂದ್ರಿಕಾಚಾರ್ಯರು (ರಘುನಾಥ ಯತಿಗಳು)** ಇವರುಗಳ ವ್ಯಾಖ್ಯಾನವು ಲಬ್ಧವಿರುವುದು. ಹಿಂದೆ ೧೯೫೮ರಲ್ಲಿ **ಶ್ರೀ ಬನ್ನಂಜೆ ಗೋವಿಂದಾಚಾರ್ಯರ ವಿಸ್ತೃತ** ಅನುವಾದ, ಇತ್ತೀಚೆಗೆ ತಂತ್ರಸಾರದ ಬಗ್ಗೆ ೧೯೯೮ರಲ್ಲಿ ಅಖಿಲ ಭಾರತ ಮಾಧ್ವ ಮಹಾಮಂಡಲದ ವತಿಯಿಂದ ಪ್ರಕಟವಾಗಿದೆ.

ಇಲ್ಲಿ ಎಲ್ಲಾ ವ್ಯಾಖ್ಯಾನಗಳನ್ನೂ ಮೂಲ ಸಂಸ್ಕೃತ ಲಿಪಿಯಲ್ಲಿ ೧೮೮೫ನೆ ಇಸ್ವಿಯಲ್ಲಿ ನಮ್ಮ ಪೂರ್ವಕರಾದ ಪಂ॥ ಘೂಳೀ ಭೀಮಾಚಾರ್ಯರ ಹಸ್ತ ಪ್ರತಿ ನನ್ನ ಸಂಗ್ರಹದಲ್ಲಿದೆ. ಮೂಲ ಕೃತಿಯನ್ನು ಅವಲೋಕನ ಮಾಡಿ ಸಾರವನ್ನಷ್ಟೇ ತಿಳಿಸುವ ಪ್ರಯತ್ನವೇ ಹೊರತು ಸಂಪೂರ್ಣ ವಿವರಣೆ ಅನುವಾದ ಮಾಡಲಾಗಲಿಲ್ಲ. ಕಾರಣ ಮೂಲ ಗ್ರಂಥಗಳಿಗಿಂತ ನನ್ನ ಅನುವಾದವು ಬೃಹತ್ತಾಗಬಾರದೆಂಬ ಅಂಶವನ್ನೂ ಗಮನದಲ್ಲಿ ಇಟ್ಟುಕೊಂಡಿರುತ್ತೇನೆ. ಸಜ್ಜನರು ಸಹೃದಯರು ಬರಮಾಡಿಕೊಳ್ಳಬೇಕು.

ಇತಿ ಸಜ್ಜನ ಚರಣವರ್ತಿ

**ಬದರೀನಾಥಾಚಾರ್ ಘೂಳಿ**

॥ ಹರಿಃ ಓಂ ॥

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತಂ

# ಶ್ರೀ ತಂತ್ರಸಾರಸಂಗ್ರಹಂ

**(ಸಾರಾಮೃತಂ)**

**ಹರಿಃ ಓಂ ಜಯತ್ಯಬ್ಜ ಭವೇಶೇಂದ್ರ ವಂದಿತಃ ಕಮಲಾಪತಿಃ ।**
**ಅನಂತ ವಿಭವಾನಂದ ಶಕ್ತಿಜ್ಞಾನಾದಿ ಸದ್ಗುಣಃ ॥**

**ಕಃಸ್ತಂತ್ರಸಾರಂ ಸಂಪ್ರಾಪ್ಯನಸ್ಯಾತ್ ಪರ್ಯಾಪ್ತ ವಾಂಛಿತಃ ।**
**ಅಮರ್ತ್ಯೈರಾಶ್ರಿತ ಚ್ಛಾಯಂ ಕಲ್ಪದ್ರುಮಮಿವೋತ್ತಮಮ್ ॥**

**ಆಚಾರ್ಯ ಕೃತಿ ನಿವೇಶ ನಮಪ್ಯ ಧೂತಂ ವಾಚೋಽಸ್ಯ ದಧೀಯಂ**
**ರಥೋದಕಮಿಹ ಗಂಗಾಪ್ರವಾಹಪಾತಃ ಪವಿತ್ರಯತಿ ।**

ಶ್ರೀಮದಾಚಾರ್ಯರ ವಿಶ್ವತೋಮುಖ ವಿದ್ವತ್ತಿಗೆ ಅವರಿಂದ ರಚಿತವಾದದ್ದೇ, **"ತಂತ್ರಸಾರಸಂಗ್ರಹ"** ಎಂಬ ಉಪಯುಕ್ತವಾದ ಗ್ರಂಥ. ಆಚಾರ್ಯರು ಈ ಗ್ರಂಥವನ್ನೇಕೆ ಬರೆದರು ಎಂಬ ಪ್ರಶ್ನೆ ಹುಟ್ಟುವುದು ಸಹಜ.

ಸಾಧಾರಣವಾಗಿ ಜನರಿಗೆ **ವಾಣಿಜ್ಯ ತಂತ್ರ, ವಿಜ್ಞಾನತಂತ್ರ, ವಿಮಾನ ತಂತ್ರ, ಯುದ್ಧತಂತ್ರ** ಇತ್ಯಾದಿಯನ್ನು ಕೇಳಿ ಅರಿತಿರುತ್ತಾರೆ. ಆದರೆ **ತಂತ್ರವು** ಸಾಹಿತ್ಯ ವಾಕ್ಯಗಳಲ್ಲಿ ಒಂದು ಭಾಷೆಯಾಗಿ ಇಷ್ಟೊಂದು ಪ್ರಗತಿ ಹೊಂದಿದೆಯಾದರೂ, ಶಾಸ್ತ್ರೀಯ ವಿಮರ್ಶೆ ಮಾಡಿದಾಗ ಅದರ ಸ್ಥಾನ ಏನು ? ಎಷ್ಟು ಹಿರಿಮೆ ? ಅನ್ನುವುದನ್ನು ನಾವು ಇಂದು ಕಾಣಬೇಕಾಗಿದೆ. **ತಂತ್ರಸಾರ**ವು ಒಂದು ಗೊಡ್ಡು ಸಂಪ್ರದಾಯವೆಂದು ತಿಳಿಯದೇ, ಈ ಗ್ರಂಥದಲ್ಲಿ ಇಷ್ಟೊಂದು ವಿಷಯಪೂರಿತವಾಗಿರುವುದನ್ನು ಗಮನಿಸಿದಾಗ ಅದರ ಮಹತ್ವವೇನೆಂದು ತಿಳಿದುಬರುವುದು.

ನಮ್ಮ ದೇಶದಲ್ಲಿ ಧಾರ್ಮಿಕ ತತ್ವಶಾಸ್ತ್ರಗಳು ಸಾಕಷ್ಟು ಬೆಳೆದು ಅನಂತ ರೂಪಗಳಾಗಿ ತಳೆದಿದೆ. ವೇದಾಂತ, ಆಗಮ, ಪುರಾಣಗಳು ಮಾನವನ ಚಿಂತನೆಯ ಬಿಂಬಗಳೇ ಆಗಿರುತ್ತೆ. ಕೆಲವನ್ನು ಕಂಡರೂ ಕೆಲವರು ಅರಿಯದಿದ್ದರೂ ವಿಷಯಗಳ ಬಗ್ಗೆ ಜಿಜ್ಞಾಸೆ ಮಾಡಿದ್ದಾರೆ. ಇನ್ನೂ ಮಾಡುತ್ತಲಿದ್ದಾರೆ. **ಇದಂ ಇತ್ಥಂ** ಎಂದು ಒಮ್ಮತವಾಗಿ ಕೇಳಿಬಂದಿಲ್ಲ. ಹೀಗೆ ತಂತ್ರಸಾರವು ಮತ್ತೊಂದು ರೀತಿಯ ವಿಲಕ್ಷಣ ಶಾಸ್ತ್ರವಾಗಿರುವುದು ಎಂದು ಹೇಳಿದರೆ ತಪ್ಪಾಗಲಾರದು.

ತಂತ್ರಸಾರ, ಮಂತ್ರಶಾಸ್ತ್ರವೆನ್ನುವುದು ಅಸತ್ಯಗಳ ಕಂತೆ. ಏಕೆ ನಂಬಬೇಕು ?



ಏನು ಪ್ರಯೋಜನ ? ಎನ್ನುವ ಗಾಂಪರ ಕಥೆ ಎಂದು ಹೆಚ್ಚಾಗಿದೆ. ತಂತ್ರಸಾರವೆಂಬುದು ದೇಶದ ಅತಿ ಪ್ರಾಚೀನ ಅಮೂಲ್ಯ ಆಸ್ತಿ ಆಗಿರುತ್ತದೆ. ಒಬ್ಬ ಆಂಗ್ಲದೇಶದ ವಿದ್ವಾಂಸ ತಂತ್ರಸಾರದ ಬಗ್ಗೆ ಅಧ್ಯಯನ ಮಾಡಿ ಅದರ ಮಹತ್ವವನ್ನು ತಿಳಿಯಲು ತನ್ನ ಇಡೀ ಜೀವನವನ್ನು ಮೀಸಲಾಗಿಸಿ ಹೀಗೆ ಬರೆದಿದ್ದಾನೆ : "They (English educated Indians - many of them) have not cared to understand this Shastra" ಎಂದು ಉದ್ಗಾರ ತೆಗೆದಿದ್ದಾನೆ. ಮತ್ತೊಬ್ಬ The cause of this type of ignorance will lead to the fact that Tantra Shastra is a Sadhana Shastra ಎಂದಿದ್ದಾನೆ. ಇದರ ಹೆಚ್ಚಿನ ಭಾಗದ ಅರಿವಾಗುವುದು ಸಾಧನ ಮಾಡಿದಾಗ ಮಾತ್ರವೆಂದು ಹೀಗೆ ತಿಳಿಸುತ್ತದೆ.

ತಂತ್ರ ಶಾಸ್ತ್ರವು ವಿವರಿಸಿ, ಪ್ರತಿ ಪಾದಿಸುವುದರ ಬಗ್ಗೆ ಅತಿ ಪ್ರಾಚೀನ ಗ್ರಂಥದಲ್ಲಿ ಈ ಸೃಷ್ಠಿ, ಪ್ರಳಯ, ಮಂತ್ರ, ದೇವತೆಗಳ ಲಕ್ಷಣ, ತೀರ್ಥ ಪರಿಚಯ ಆಶ್ರಮ ಆಶ್ರಮ ಧರ್ಮ, ವಿಪ್ರತ್ವ ಧರ್ಮ, ಪ್ರಾಣಿ ಯಂತ್ರ ನಿರ್ಮಾಣ, ಮರ (Botanical), Astrology, History, Etimology, environment, ಶೌಚ, ಅಶೌಚ, ಸ್ವರ್ಗ ನರಕ, ಇತ್ಯಾದಿಯಾಗಿ ಅನೇಕ ತರಹ ವಿಷಯುಗಳನ್ನು ತಂತ್ರಸಾರ ವಿವರಿಸುವುದು.

ತಂತ್ರಸಾರಸಂಗ್ರಹವು ಹೆಚ್ಚಾಗಿ ಪಂಚರಾತ್ರವನ್ನು ಅವಲಂಬಿಸಿರುವುದನ್ನು ಗಮನಿಸಬೇಕು. ಶ್ರೀಮದಾಚಾರ್ಯರ ಕೃತಿಯಾದ **"ತಂತ್ರಸಾರ ಸಂಗ್ರಹ"**ವು ಪರಮ ಸಾತ್ವಿಕ ಶ್ರೇಷ್ಠ ಗ್ರಂಥವಾಗಿರುತ್ತದೆ. ಮಹಾಮೇಧಾವಿಗಳೆನಿಸಿದ ಶ್ರೀ ಶಂಕರಾಚಾರ್ಯರದ್ದೆ ಅತಿ ಪ್ರಾಚೀನ ವಿವರಣೆ ಆಗಿರುವುದೆಂದು ತಿಳಿದುಬರುತ್ತದೆ. ಅವರು ರಚಿಸಿದ **"ಪ್ರಪಂಚಸಾರ"**ವೆಂಬ ಕೃತಿ ಅಪೂರ್ವ ತಂತ್ರ ಗ್ರಂಥ. ಆದರೆ ವಿಚಿತ್ರವೆಂದರೆ ಶ್ರೀಶಂಕರಾಚಾರ್ಯರು ವೈಷ್ಣವರಾಗಿದ್ದರೂ ಕೆಲವೊಮ್ಮೆ ಶಾಕ್ತಪಂಥಕ್ಕೆ ಪ್ರಭಾವಿತರಾಗಿ, ಕಾಪಾಲಿಕ, ವ್ಯಾಭಿಚಾರಿಕ, ವಾಮ, ಪಂಥಗಳನ್ನು ವರ್ಣಿಸಿ ಶ್ಲಾಘನೆ ಮಾಡಿರುತ್ತಾರೆ. "Sri Shankaracharya was a Vaishnava but his soul-stirring Hymn to the Devi in the 11th Chapter of Prapanchasara would lead anyone to believe that he was a Shakta" (Sir John Woodroof). ಆದರೆ ಆಚಾರ್ಯ ಶ್ರೀಮಧ್ವರು ಇಂತಹ ಅತಂತ್ರಗಳನ್ನು ಕಡೆಗಣಿಸಿ ಪವಿತ್ರ ಶುದ್ಧ ಅಂತಃಕರಣಯುಕ್ತ ಸಾತ್ವಿಕ ರೂಪ ತಂತ್ರಗಳನ್ನು ತಿಳಿಸಿರುತ್ತಾರೆ. ತಂತ್ರಗಳಿಂದ ಇಚ್ಛಾಶಕ್ತಿ, ನಿಗ್ರಹ, ಮಂತ್ರಬಲದಿಂದ ಸಂಪಾದಿಸಿದ ವೈಷ್ಣವ ಸಂಪ್ರದಾಯಾನುಸಾರ ದೇವತಾ ಮಂತ್ರಗಳು, ಪೂಜಾವಿಧಾನ, ಭಗವದನುಗ್ರಹ ಸಂಪಾದನೆ ಹೇಗೆ ಪಡೆಯಬೇಕು ಎಂಬುದನ್ನು ತಿಳಿಸಿ ಮಹೋಪಕಾರ ಮಾಡಿದ ಏಕೈಕ ಆಚಾರ್ಯರು. ಹಿಂದಿನ ಋಷಿಮುನಿಗಳು ತಮ್ಮ ಜೀವನವಿಡೀ ಸಾಧಿಸಿದ ಮಂತ್ರಶಕ್ತಿ ಈಗಿನವರಲ್ಲಿ ಏಕೆ ಬಂದಿಲ್ಲವೆಂದು ಶೋಕವಾಗುವುದು. ಮುಖ್ಯವಾಗಿ ಮಂತ್ರಶಕ್ತಿ, ತಂತ್ರಗಳಿಂದ ಲಭ್ಯವಾದ ತಂತ್ರಶಕ್ತಿ

ಒಂದು ಸಾಧನ ಮಾಧ್ಯಮ ಎನ್ನುವುದನ್ನು ತೋರಿಸಿಕೊಟ್ಟ ಮಹಾಮುನಿಗಳೇ ಶ್ರೀಮದಾಚಾರ್ಯರು.

## ಶ್ರೀಮದಾಚಾರ್ಯರ ತಂತ್ರಸಾರಸಂಗ್ರಹ ಗ್ರಂಥ ಪರಿಚಯ :

**"ಆಹದೇವೋ ರವೋತ್ಸಂಗ ವಿಲಸತ್ ಪಾದ ಪಲ್ಲವಃ"** ಎಂಬುದಾಗಿ ಆಚಾರ್ಯರು ತಂತ್ರಸಾರ ಗ್ರಂಥಾರಂಭದಲ್ಲಿ ಬರೆದಿದ್ದರಿಂದ ಈ ಗ್ರಂಥವು ಮಹಾವಿಷ್ಣುವಿನಿಂದ ರಚಿತವಾದ ತಂತ್ರಸಾರದಿಂದ ಉಧೃತವಾಗಿರುವುದೆಂದು ತಿಳಿದುಬರುವುದು.

## ತಂತ್ರ ಎಂದರೇನು ತಿಳಿಯೋಣ :

ತಂತ್ರ ಒಂದು ಆಚರಣೆ. ಮಂತ್ರ ಪಠಿಸುವಾಗ ತಂತ್ರ ಸರಿಯಾಗಿ ಇರುವುದು. It is a religious treatise teaching mystic formulations for the worship of the deity in the regular order of ceremonies. The theory of Ritual (V.S.Apte) ಧರ್ಮಾಚರಣೆಯಲ್ಲಿ ಶಾಸ್ತ್ರೋಕ್ತ ವಿಧಾನ ಪದ್ಧತಿಯನ್ನು ತಿಳಿಸುವ ಸಾತ್ವಿಕ ಪಂಥವು. **ವಿಧಿಂ ವಿಧಾಯ ಸರ್ಗಾದೌ ತೇನ ಪೃಷ್ಟೋಽಬ್ಜ ಲೋಚನಃ। ಆಹದೇವೋ ರವೋತ್ಸಂಗ ವಿಲಸತ್ ಪಾದ ಪಲ್ಲವಃ॥** ಭಗವಂತನೇ ಸ್ವಯಂ ಬ್ರಹ್ಮದೇವರನ್ನು ಸೃಷ್ಟಿಸಿದ ನಂತರ ಅವರ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ತಂತ್ರಸಾರವನ್ನು ತಿಳಿಸಿದನು ಎಂದು ಹೇಳಿದ್ದಾರೆ.

ಈ ಗ್ರಂಥವು ತಾತ್ವಿಕ ಮಂತ್ರಗಳನ್ನು ತಿಳಿಸುವುದರ ಜೊತೆಗೆ ಇದರ ಪಠಣದಿಂದ ಸಾಧಕರನ್ನು ಭವಸಂಸಾರದಿಂದ ಮುಕ್ತರನ್ನಾಗಿ ಮಾಡಿ ರಕ್ಷಣೆಯನ್ನು ಕೊಡುವುದು ಎನ್ನುವ ಅರ್ಥವು ತಂತ್ರವೆನ್ನಲಾಗಿದೆ.

**ತನೋತಿ ವಿಪುಲಾನ್ ಅರ್ಥಾನ್ ತಂತ್ರಮಂತ್ರ ಸಮನ್ವಿತಾನ್ ।**
**ತ್ರಾಣಂ ಚ ಕುರುತೇ ಯಸ್ಮಾತ್ ತಂತ್ರಮಿತ್ಯಭಿಧೀಯತೆ**

ತಂತ್ರ ಎಂದರೆ **ಆಗಮ**ವೆಂಬ ಹೆಸರೂ ಇರುವುದು. ಹೀಗೆ ತಂತ್ರಾಗಮಗಳು ಮುಖ್ಯವಾಗಿ ಶೈವ, ಶಾಕ್ತ ಮತ್ತು ವೈಷ್ಣವಾಗಮಗಳೆಂದು ವಿಭಾಗಿಸಲಾಗಿದೆ. ಹಿಂದೆ ತಿಳಿಸಿದಂತೆ ಶ್ರೀ ಶಂಕರಾಚಾರ್ಯರ ಮೇಲೆ ಶಾಕ್ತ, ಶೈವ, ಗಾಣಪತ್ಯಾದಿಗಳ ಪ್ರಭಾವ ಬೀರಿದಾಗ ತತ್ ಆಗಮಗಳನ್ನು ಸ್ತೋತ್ರಮಾಡಿ ವರ್ಣಿಸಿರುತ್ತಾರೆ. ಆದರೆ, ಆಚಾರ್ಯ ಶ್ರೀ ಮಧ್ವರೊಬ್ಬರೇ ಅವೆಲ್ಲವನ್ನು ತಿರಸ್ಕರಿಸಿ ಶುದ್ಧ ವೈಷ್ಣವ ಸಾತ್ವಿಕ ತಂತ್ರಸಾರವನ್ನು ವಿವರಿಸಿರುವುದು ಅವರ ಮಹತ್ವ. ಶ್ರೀಮದಾಚಾರ್ಯರು ಭಾಗವತ, ಭಾರತ ತಾತ್ಪರ್ಯಾದಿಗಳಲ್ಲಿ ಸಾಕಷ್ಟು ಉಲ್ಲೇಖಿಸಿರುವುದರಿಂದ ತಂತ್ರಸಾರದ ಹಿರಿಮೆ ಎಂಥದ್ದು ಎಂಬುದು ಗಮನಾರ್ಹ.



## ಶ್ರೀಮದಾಚಾರ್ಯರ ತಂತ್ರಸಾರ :

ತಂತ್ರಸಾರಸಂಗ್ರಹದಲ್ಲಿ ನಾಲ್ಕು ಅಧ್ಯಾಯಗಳಿದ್ದು 442 ಶ್ಲೋಕಗಳಿವೆ.

1) **ಮೊದಲನೇ ಅಧ್ಯಾಯದಲ್ಲಿ** 75 ಶ್ಲೋಕಗಳಿಂದ ಮಹಾಮಂತ್ರಗಳು, ಮಾತೃಕಾನ್ಯಾಸ ಅಷ್ಟಾಕ್ಷರ ಮಂತ್ರ ಇತ್ಯಾದಿಗಳನ್ನು ತಿಳಿಸಿ

**ಏತೇತು ಸರ್ವಮಂತ್ರಾಣಾಂ ಮೂಲ ಮಂತ್ರಾ ವಿಶೇಷತಃ ॥**
**ಏತಜ್ಜಪಾತ್‌ಸಮಸ್ತಾನಾಂ ಮಂತ್ರಾಣಾಂ ಜಪಿತೋ ಭವೇತ್ ॥**

ಎಂದು ಹೇಳಿ ಫಲಯುಕ್ತವಾಗಿರುತ್ತದೆ ಎಂದಿದ್ದಾರೆ. ಪೂಜಾಕ್ರಮ ನೈವೇದ್ಯ, ಧೂಪ, ದೀಪ ಇತ್ಯಾದಿಗಳನ್ನು ತಿಳಿಸಿ

**ಬ್ರಹ್ಮಾದಯಶ್ಚತದ್ಭಕ್ತ್ಯಾ ಭಾಗಿನೋ ಭೋಗವೋ ಕ್ಷಯೋಃ**
**ತಸ್ಮಾಜ್ಞೇಯಶ್ಚ ಪೂಜ್ಯಶ್ಚ್ಯ ವಂದ್ಯೋ ಧೇಯಃ ಸದಾ ಹರಿಃ**

ಎಂದು ತಿಳಿಸಿ ಬ್ರಹ್ಮರುದ್ರಾದಿಗಳೂ ಸಹ ಭಗವಂತನ ಪೂಜೆ ಮಾಡಿ ಸಹಭೋಗವನ್ನು ಭುಂಜಿಸುತ್ತಾರೆ. ಮೋಕ್ಷವನ್ನು ಪಡೆಯುತ್ತಾರೆ. ತಸ್ಮಾತ್ **ಶ್ರೀಹರಿ**ಯನ್ನೇ ಸದಾ ಪೂಜಿಸಬೇಕು. **ವಂದನೆ ಧ್ಯಾನ** ಮಾಡಬೇಕೆಂದು ಹೇಳುತ್ತಾರೆ.

2) **ಎರಡನೇ ಅಧ್ಯಾಯದಲ್ಲಿ** 24 ಶ್ಲೋಕಗಳಿಂದ ಹೋಮ ವಿಧಾನ, ಹೋಮ ಕುಂಡಗಳ ಆಕಾರ ಮತ್ತು ಅಳತೆ ವಿವರವನ್ನು ಶ್ರೀಮದಾಚಾರ್ಯರು ಸಂಗ್ರಹಿಸಿರುವ ಕ್ರಮ ಅಸಾದೃಶವಾಗಿದ್ದು ಇಷ್ಟು ಕ್ರಮವಾಗಿ ಚಿಕ್ಕದಾಗಿ ನಿರೂಪಿಸಿದ ಪರಿ ಇನ್ನಾವ ಗ್ರಂಥದಲ್ಲಿಯೂ ಕಾಣಲಾಗದು.

3) **ಮೂರನೇ ಅಧ್ಯಾಯದಲ್ಲಿ** 162 ಶ್ಲೋಕಗಳಿದ್ದು ಇದು ಒಂದು ಅಮೂಲ್ಯ ಗಣಿಯಂತೆ ವಿಶಿಷ್ಟ ವಿಷಯಗಳನ್ನು ಒಳಗೊಂಡಿದೆ. ವಾಸ್ತು ಶಾಸ್ತ್ರ ಶಿಲ್ಪ ವಿವಿಧ ದೇವತಾ ಪ್ರತಿಮೆಗಳು ಪ್ರತಿಷ್ಠಾಪನೆ ಇತ್ಯಾದಿಯಾದ ವಿವರಗಳು ಒಂದು ಮಾರ್ಗಸೂಚಿಯಾಗಿರುತ್ತದೆ. An inimitable guideline to any architect, as far as creation is concerned. In short, whatever is needed in construction and consecration etc., are dealt in detail. (for more details of Mantra Agni Purana may be referred) ದೇವಾಲಯ ನಿರ್ಮಾಣ, ವಾಸ್ತುಶಾಂತಿ, ಪ್ರತಿಮಾ ಪ್ರತಿಷ್ಠಾಪನೆ, ಅಂಕುರಾರ್ಪಣ, ಪ್ರತಿಮಾಲಕ್ಷಣಗಳಿಗೆ ಏನು ಅಗತ್ಯವೋ ಅವೆಲ್ಲವನ್ನೂ ನಿರೂಪಿಸಿರುವುದು ಅಮೋಘ, ಅತಿ ಸುಂದರ ಮತ್ತು ಅವರ್ಣನೀಯ. (T.A.Gopinath Rao has brought out a detailed treatise on Iconography in English, Oriental Library, Mysore)

4) **ಇದೇ ರೀತಿ ನಾಲ್ಕನೇ ಅಧ್ಯಾಯವು** 181 ಶ್ಲೋಕಗಳಿರುವ ಮತ್ತೊಂದು ವಿಶಿಷ್ಠ ಸಂಗ್ರಹ. ವರ್ಣಿಸಲು ನಮಗೆ ಶಬ್ದದಾರಿದ್ರ್ಯದಿಂದ ಹೆಚ್ಚು ತಿಳಿಸಲು ಆಗುವುದಿಲ್ಲ.

**1. ಮೊದಲನೆ ಅಧ್ಯಾಯ**ದಲ್ಲಿ ಶ್ರೀಮದಾಚಾರ್ಯರು ನಿರೂಪಿಸಿರುವ ಮಂತ್ರಗಳ ಭಂಡಾರವೇ ಆಗಿ ಸಂಗ್ರಹಿಸಿರುವರು. ಕೇವಲ ಸಾತ್ವಿಕ ಮಂತ್ರಗಳನ್ನಷ್ಟೇ ವಿಶದವಾಗಿ ತಿಳಿಸಿರುವುದರಿಂದ ಇತರೇ ಅವೈದಿಕ, ವಾಮಾಚಾರ, ಉಚ್ಛಿಷ್ಠ ಗಣಪತಿ ಇತ್ಯಾದಿಯನ್ನೂ ಉಲ್ಲೇಖಿಸದೇ ಶ್ರೀಹರಿಪಾರಮ್ಯವನ್ನು ತಿಳಿಸುವ ಸಜ್ಜನ ಹಿತಬೋಧಕ ಮಂತ್ರಗಳನ್ನು ಕಾಣುತ್ತೇವೆ.

ಹೀಗೆ ಆಚಾರ್ಯ ಶ್ರೀಮಧ್ವರು ವಿಶ್ವತೋಮುಖ ಪಾಂಡಿತ್ಯದೊಂದಿಗೆ ಮತಸ್ಥಾಪನೆ, ಪ್ರಚಾರ, ಪರಮತ ಖಂಡನೆ ಮಾಡುತ್ತಾ ಸಿದ್ಧಾಂತ ಸ್ಥಾಪನೆ, ಸಂಚಾರಗಳನ್ನು ಬಿರುಗಾಳಿಯಂತೆ ತಿರುಗುವಾಗ ಇಂಥದ್ದೊಂದು ಉತ್ಕೃಷ್ಟ ಗ್ರಂಥ ಶ್ರೀಮದಾಚಾರ್ಯರ ಜೀವಿತ ಕಾಲದಲ್ಲಿ ಇಷ್ಟೊಂದು ವಿಷಯ ಸಂಗ್ರಹ, ನಿರೂಪಣೆ, ಸಾಧ್ಯವಾಯಿತಾದರೂ ಹೇಗೆ ಎನ್ನುವಂತೆ ಆನಂದಪಡಬೇಕಾಗಿದೆ. ಆಗಿನ ಕಾಲದಲ್ಲಿ ಉಡುಪಿ ಅಷ್ಟೇನೂ ನಾಗರೀಕತೆಯನ್ನು ಹೊಂದದೇ ಇದ್ದ ಒಂದು ಚಿಕ್ಕ ಹಳ್ಳಿಯೊಂದರಲ್ಲಿ ಇದ್ದುಕೊಂಡು ಲೋಕಾತೀತ ವಿದ್ವತ್ತನ್ನು ಹೊಂದಿದ್ದರೆಂದರೆ ನಿಜಕ್ಕೂ ಆಚಾರ್ಯರು ದೇವತಾಂಶ ಸಂಭೂತರಷ್ಟೇ ಅಲ್ಲ, ಶ್ರೀ ವಾಯುದೇವರ ತೃತೀಯ ಅವತಾರವಾದ ಸರ್ವಜ್ಞಾಚಾರ್ಯರೇ ಆಗಿರುತ್ತಾರೆಂಬುದು ಖಚಿತವಾಗುವುದು. ಎಲ್ಲಿಯ ವೇದಾಂತ ಎಲ್ಲಿಯ ತಂತ್ರಜ್ಞಾನ ಒಂದಕ್ಕೊಂದು ಸಂಬಂಧವೇ ಇಲ್ಲದಿದ್ದಾಗ ಒಬ್ಬ ಮನುಷ್ಯ ಇಷ್ಟೊಂದು ಅಗಾಧ ಪಾಂಡಿತ್ಯವನ್ನು ಸಂಪಾದಿಸಿದುದರ ಜತೆಗೆ ನಿಖರವಾಗಿ ಇದಂ ಇತ್ಥಂ ಅಂತ ವಿವರಿಸುವುದರಿಂದ ಇವರಿಗೆ ಸರಿಸಾಟಿ ಇಲ್ಲವೆಂದು ತಿಳಿದುಬರುತ್ತದೆ.

**ಆನಂದ ಚಿತ್ಯದಿತಿ ಪೂರ್ವಗುಣ್ಯೈಃ ಸಮಸ್ತೈಃ**
**ಮರ್ತ್ಯಾದಿಭಿರ್ವಿಧಿ ಪರ್ಯೈರ್ಭಗವಾನ್ ಕ್ರಮೇಣ ।**
**ಧ್ಯಾತೋಽಧಿಕೈರಧಿಗುಣೋಽಧಿಕಮೇವ ಸೌಖ್ಯಂ**
**ಮುಕ್ತೌ ದದಾತಿ ಸತತಂ ಪರಮ ಸ್ವರೂಪಃ ॥**

– ತಂತ್ರಸಾ. 4-176

**ವಿವರಣೆ :** ಶ್ರೀಮನ್ನಾರಾಯಣನು ಆನಂದ, ಜ್ಞಾನ, ದೋಷ ರಹಿತ ಸ್ವಾಮಿತ್ವ ಇತ್ಯದಿ ಗುಣಗಳಿಂದ ಕೂಡಿದವನೆಂದು **ಬ್ರಹ್ಮದೇವ**ರಿಂದ ಆರಂಭಿಸಿ ಮಾನವರು ತಮ್ಮತಮ್ಮ ಅಧಿಕಾರಕ್ಕೆ ತಕ್ಕಂತೆ ಧ್ಯಾನಿಸುತ್ತಾರೆ. ಶ್ರೀ ಹರಿಯಾದರೂ ತಾರತಮ್ಯ ಪ್ರಕಾರ ಅವರ ಧ್ಯಾನ, ಉಪಾಸನೆಗಳಿಗನುಗುಣವಾಗಿ ಶಾಶ್ವತ ಆನಂದವನ್ನು ದಯಪಾಲಿಸುತ್ತಾನೆ.



**ನಿರ್ದೋಷಾಖಿಲ ಸಂಪೂರ್ಣ ಗುಣೇನ ಹರಿಣಾ ಸ್ವಯಮ್,**
**ಬ್ರಹ್ಮಣೇ ಕಥಿತಾತ್ತಂತ್ರಸಾರಾ ದುದ್ಧೃತ್ಯ ಸಾದರಮ್ ।**
**ಆನಂದತೀರ್ಥ ಮುನಿನಾ ಕೃತೋಗ್ರಂಥೋಽಯಮಂಜುಸಾ ॥**

ಆನಂದಾದಿ ಗುಣಯುಕ್ತನು ನಿರ್ದೋಷನಾದ ಶ್ರೀ ಲಕ್ಷ್ಮೀಪತಿಯು ಸ್ವಯಂ ಚತುರ್ಮುಖ ಬ್ರಹ್ಮದೇವರಿಗೆ ಉಪದೇಶ ಮಾಡಿರುವ ತಂತ್ರಸಾರದಿಂದ ಆಯ್ದ ಮುಖ್ಯ ಭಾಗವು ಆನಂದ ತೀರ್ಥರೆಂಬ ಮುನಿಗಳು ಮನೋಹರವಾಗಿರುವ ಗ್ರಂಥವು ಶ್ರದ್ಧೆಯಿಂದ ರಚಿಸಲಾಗಿದೆ.

**ವಿಜ್ಞಾಪನೆ :** ತಂತ್ರಸಾರ ಸಂಗ್ರಹ ವಿಸ್ತೃತವಾಗಿರುವುದು. ಇಷ್ಟು ದೀರ್ಘ ವಿವರಣೆ. ಸುಮಾರು 225 ಪುಟಗಳಾಗುವುದು. ಇಲ್ಲಿ ನನ್ನ ಪ್ರಯತ್ನ ಸಂಕೋಚಮಾಡಿ ಹೆಚ್ಚಿಗೆ ಕೇಶವಾದಿ 24 ಮೂರ್ತಿಗಳು, ನಾಲ್ಕು ಹಸ್ತಗಳು, ಅವು ಧರಿಸಿದ ಶಂಖ, ಚಕ್ರಾದಿ ಆಯುಧಗಳು, ತತ್ರಾಪಿ 2ನೇ ಅಧ್ಯಾಯದಲ್ಲಿ ಶ್ರೀ ಮಧ್ವಾಚಾರ್ಯರು ವಿವರಿಸಿದಂತೆ ಹೋಮ ವಿಧಾನ, ಇತ್ಯಾದಿಗಳನ್ನು ವಿವರಿಸಲಾಗಿದೆ.

ಕಲಶಸ್ಥಾಪನೆಯ ಭದ್ರಕಾ ಮಂಡಲ ನಕ್ಷೆ ಇನ್ನು 3ನೇ ಅಧ್ಯಯನದಲ್ಲಿ ವಿವರಣೆ ರೀತ್ಯಾ ದೇವಾಲಯ, ವಾಸ್ತುನಕ್ಷೆ, ಪ್ರತಿಮಾ ಲಕ್ಷಣ ಇವುಗಳನ್ನಷ್ಟು ಯಥಾಥೀತ ಅಧ್ಯಯನ ಮಾಡಿ ತಕ್ಕಮಟ್ಟಿಗೆ ಶೋಧನೆ ಮಾಡಿ ಬರೆಯಲಾಗಿದೆ.

## ಶ್ರೀ ಭಗವಂತನ ೨೪ ಭಗವನ್ಮೂರ್ತಿಗಳು ಯಾವುವು ಎನ್ನುವುದನ್ನು ತಿಳಿಸಲಾಗಿದೆ.

**ಮುಖ್ಯ ವಿಷಯ :** 24 ಮೂರ್ತಿಗಳು ಪ್ರತ್ಯೇಕ ಲಕ್ಷಣಗಳುಳ್ಳದ್ದಾಗಿ ಆರು ದೇವತೆಗಳಂತೆ 4 ಗುಂಪು ಇರುವುದು.

1. ಕೇಶವ, ಮಧುಸೂದನ, ಸಂಕರ್ಷಣ, ದಾಮೋದರ, ವಾಸುದೇವ, ಪ್ರದ್ಯುಮ್ನ ಆರು ಮೂರ್ತಿಗಳ ಒಂದು ಗುಂಪು.
2. ವಿಷ್ಣು, ಮಾಧವ, ಅನಿರುದ್ಧ, ಪುರುಷೋತ್ತಮ, ಅಧೋಕ್ಷಜ, ಜನಾರ್ದನ – ಆರರ ಒಂದು ಗುಂಪು.
3. ಗೋವಿಂದ, ತ್ರಿವಿಕ್ರಮ, ಶ್ರೀಧರ, ಹೃಷೀಕೇಶ, ನೃಸಿಂಹ, ಅಚ್ಯುತ – ಆರರ ಒಂದು ಗುಂಪು.
4. ವಾಮನ, ನಾರಾಯಣ, ಪದ್ಮನಾಭ, ಉಪೇಂದ್ರ, ಹರಿ, ಕೃಷ್ಣ – ಆರರ ಒಂದು ಗುಂಪು.


ಕೇಶವ


ನಾರಾಯಣ


ಮಾಧವ


ಗೋವಿಂದ


ವಿಷ್ಣು


ಮಧುಸೂದನ


ತ್ರಿವಿಕ್ರಮ


ವಾಮನ


ಶ್ರೀಧರ


ಹೃಷೀಕೇಶ


ಪದ್ಮನಾಭ


ದಾಮೋದರ


ಸಂಕರ್ಷಣ


ವಾಸುದೇವ


ಪ್ರದ್ಯುಮ್ನ


ಅನಿರುದ್ಧ




ಪುರುಷೋತ್ತಮ


ಅಧೋಕ್ಷಜ


ನಾರಸಿಂಹ


ಅಚ್ಯುತ


ಜನಾರ್ದನ


ಉಪೇಂದ್ರ


ಹರಿ


ಕೃಷ್ಣ

**ನಾರಾಯಣಾಷ್ಟಾಕ್ಷರಾಚ್ಚ ವ್ಯಾಹೃತಿಭ್ಯಸ್ತಥೈವ ಚ ।**
**ವಿಭೇದೋದ್ವಾದಶಾರ್ಣಾನಾಂ ಕೇಶವಾದ್ಯಾಶ್ಚ ದೇವತಾಃ ।**
**ನಾರಾಯಣಾಷ್ಟಾರಾಚ್ಚ ವ್ಯಾಹೃತಿ ತ್ರಿಗುಣಾತ್ಪುನಃ ।**
**ವೇದ ಮಾತಾ ತುಗಾಯತ್ರೀದ್ವಿಗುಣಾ ದ್ವಾದಶಾಕ್ಷರಾತ್ ॥**
**ಚತುರ್ವಿಂಶನ್ಮೂರ್ತಯೋಸ್ಯಾಃ ಕಥಿತಾ ವರ್ಣದೇವತಾಃ ।**
**ತದ್ಭೇದಾಃ ಪೌರುಷಂ ಸೂಕ್ತಂ ವೇದಾಃ ಪುರುಷ ಸುಕ್ತಗಾಃ ॥**

1. ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ, ದಾಮೋದರ ಇವು ಹನ್ನೆರಡು ಮೂರ್ತಿಗಳು.
2. ಇದರ ಜತೆಗೆ ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಪುರುಷೋತ್ತಮ, ಅಧೋಕ್ಷಜ, ನಾರಸಿಂಹ, ಅಚ್ಯುತ, ಜನಾರ್ದನ, ಉಪೇಂದ್ರ, ಹರಿ, ಕೃಷ್ಣ

ಇವು ಸೇರಿದಾಗ 24 ಮೂರ್ತಿಗಳಾಗುವುದೆಂದು ಶ್ರೀಮದಾಚಾರ್ಯರು ತಿಳಿಸಿ ಈ ಮೂರ್ತಿಗಳೇ ಗಾಯತ್ರಿಯ ವರ್ಣದೇವತೆಗಳು. ಇವೇ ವೇದಗಳಿಂದ ಅಭಿವ್ಯಕ್ತವಾಗುವುದು. ಆದ್ದರಿಂದ ಶ್ರೀಮದಾಚಾರ್ಯರು **''ವೇದ ಮಾತಾತು ಗಾಯತ್ರೀ''** ಎಂದು ತಿಳಿಸಿರುತ್ತಾರೆ.

ಮೇಲೆ ತಿಳಿಸಿದ ರೀತ್ಯಾ 24 ಮೂರ್ತಿಗಳು ಧರಿಸಿದ ಆಯುಧ ಲಕ್ಷಣಗಳು ಹೀಗೆ ನಿಷ್ಕರ್ಶಿಸಲಾಗಿದೆ.

**ವಿಶೇಷಾಂಕ :** ಆಕಾರಾದಿ ವರ್ಣಗಳು ದೇವತೆಗಳು ನಿತ್ಯವಾಗಿರುವುದರಿಂದ ಹಿಂದೆ ಮುಂದೆ ಬಂದಿರುವುದಾಗಿ ತಿಳಿಯಬಾರದು. ಏಕೆಂದರೆ ಎಲ್ಲಾ ಭಗವದ್ರೂಪಗಳು, ಕಾಲ ದೇಶಗಳಲ್ಲಿಯೂ ನಿತ್ಯವೇ. ಆದರೆ, ಬ್ರಹ್ಮದೇವರಿಗೆ ಅಭಿವ್ಯಕ್ತವಾದ ಪದ್ಧತಿ ಕ್ರಮವನ್ನು ಅನುಸರಿಸಲಾಗಿದೆ ವಿನಃ ಪೂರ್ವಾಪರವನ್ನು ತಿಳಿಯುವಂತಿಲ್ಲ.

ಪ್ರತಿ ಮಂತ್ರಗಳನ್ನು ಜಪಿಸುವ ಮುನ್ನ **ಋಷಿ ಛಂದಸ್ಸು ದೇವತೆ**ಗಳನ್ನು ಸ್ಮರಿಸಬೇಕು.

ಈ ಹಿಂದೆ ತಿಳಿಸಿದಂತೆ 24 ಮೂರ್ತಿಗಳು ಮತ್ತು ಅವರು ಧರಿಸಿದ ಆಯುಧ ಲಕ್ಷಣಗಳು ಈ ಕೆಳಗೆ ವಿವರಿಸಲಾಗಿದೆ.

| | **ನಾಮಗಳು** | **ಆಯುಧಗಳು** |
|---|---|---|
| 1. | ಕೇಶವ | ಶಂಖ ಚಕ್ರ ಗದಾ ಪದ್ಮ |
| 2. | ನಾರಾಯಣ | ಪದ್ಮ ಗದಾ ಚಕ್ರ ಶಂಖ |
| 3. | ಮಾಧವ | ಚಕ್ರ ಶಂಖ ಪದ್ಮ ಗದಾ |
| 4. | ಗೋವಿಂದ | ಗದಾ ಪದ್ಮ ಶಂಖ ಚಕ್ರ |
| 5. | ವಿಷ್ಣು | ಪದ್ಮ ಶಂಖ ಚಕ್ರ ಗದಾ |
| 6. | ಮಧುಸೂದನ | ಶಂಖ ಪದ್ಮ ಗದಾ ಚಕ್ರ |
| 7. | ತ್ರಿವಿಕ್ರಮ | ಗದಾ ಚಕ್ರ ಶಂಖ ಪದ್ಮ |
| 8. | ವಾಮನ | ಚಕ್ರ ಗದಾ ಪದ್ಮ ಶಂಖ |
| 9. | ಶ್ರೀಧರ | ಚಕ್ರ ಗದಾ ಶಂಖ ಪದ್ಮ |
| 10. | ಹೃಷೀಕೇಶ | ಚಕ್ರ ಪದ್ಮ ಶಂಖ ಗದಾ |
| 11. | ಪದ್ಮನಾಭ | ಪದ್ಮ ಚಕ್ರ ಗದಾ ಶಂಖ |
| 12. | ದಾಮೋದರ | ಶಂಖ ಗದಾ ಚಕ್ರ ಪದ್ಮ |
| 13. | ಸಂಕರ್ಷಣ | ಶಂಖ ಪದ್ಮ ಚಕ್ರ ಗದಾ |
| 14. | ವಾಸುದೇವ | ಶಂಖ ಚಕ್ರ ಪದ್ಮ ಗದಾ |
| 15. | ಪ್ರದ್ಯುಮ್ನ | ಶಂಖ ಗದಾ ಪದ್ಮ ಚಕ್ರ |
| 16. | ಅನಿರುದ್ಧ | ಗದಾ ಶಂಖ ಪದ್ಮ ಚಕ್ರ |
| 17. | ಪುರುಷೋತ್ತಮ | ಪದ್ಮ ಶಂಖ ಗದಾ ಚಕ್ರ |
| 18. | ಅಧೋಕ್ಷಜ | ಗದಾ ಶಂಖ ಚಕ್ರ ಪದ್ಮ |
| 19. | ನಾರಸಿಂಹ | ಪದ್ಮ ಗದಾ ಶಂಖ ಚಕ್ರ |
| 20. | ಅಚ್ಯುತ | ಪದ್ಮ ಚಕ್ರ ಶಂಖ ಗದಾ |



| | | |
|---|---|---|
| 21. | ಜನಾರ್ದನ | ಚಕ್ರ ಶಂಖ ಗದಾ ಪದ್ಮ |
| 22. | ಉಪೇಂದ್ರ | ಗದಾ ಚಕ್ರ ಪದ್ಮ ಶಂಖ |
| 23. | ಹರಿ | ಚಕ್ರ ಪದ್ಮ ಗದಾ ಶಂಖ |
| 24. | ಕೃಷ್ಣ | ಗದಾ ಪದ್ಮ ಚಕ್ರ ಶಂಖ |

**ವೈಶಿಷ್ಟ್ಯತೆ :**

1. ಮಾಧವ, ಹೃಷೀಕೇಶ, ವಾಮನ, ಜನಾರ್ದನ, ಶ್ರೀಧರ, ಹರಿ } ಈ ಆರು ರೂಪಗಳಲ್ಲಿ ಚಕ್ರವೇ ಮೊದಲನೇ ಆಯುಧ
2. ಕೇಶವ, ಸಂಕರ್ಷಣ, ಮಧುಸೂದನ, ವಾಸುದೇವ, ದಾಮೋದರ, ಪ್ರದ್ಯುಮ್ನ } ಈ ಆರು ಶಂಖಧಾರಣೆಯಿಂದ ಮೊದಲಾಗುತ್ತದೆ.
3. ಗೋವಿಂದ, ಅಧೋಕ್ಷಜ, ತ್ರಿವಿಕ್ರಮ, ಉಪೇಂದ್ರ, ಅನಿರುದ್ಧ, ಕೃಷ್ಣ } ಈ ಆರು ಮೂರ್ತಿಗಳು ಗದಾ ಮೊದಲಿಗೆ ಧರಿಸುತ್ತಾರೆ.
4. ನಾರಾಯಣ, ಪುರುಷೋತ್ತಮ, ವಿಷ್ಣು, ಪದ್ಮನಾಭ, ನಾರಸಿಂಹ, ಅಚ್ಯುತ } ಈ ಆರು ಪದ್ಮಧಾರಣದಿಂದ ಮೊದಲಾಗುತ್ತದೆ.

ಈ ರೀತಿ ಚಿಂತನೆ, ನ್ಯಾಸ ಮಾಡಬೇಕೆಂದು ತಿಳಿಸಿ ಕೊನೆಗೆ ಈ ಎಲ್ಲಾ ಮಂತ್ರಗಳು ಬಾಕಿ ಮಂತ್ರಗಳಿಗೆ ಮೂಲ ರೂಪವಾಗಿರುವುದು. ಹೀಗೆ ತಿಳಿದಿದ್ದೇ ಆದರೆ, ಮಂತ್ರಾರ್ಥ ಜಪಿಸಿದಾಗ ಬಾಕಿ ಮಂತ್ರ ಜಪ ಫಲವು ಲಭಿಸುವುದೆಂದು ತಿಳಿಸುತ್ತಾರೆ.

**ಏತೇತು ಸರ್ವಮಂತ್ರಾಣಾಂ ಮೂಲ ಮಂತ್ರಾ ವಿಶೇಷತಃ**

**.........**

**ಎತಜ್ಜಪಾತ್ಸ ಮಸ್ತಾನಾಂ ಮಂತ್ರಾಣಾಂ ಜಪಕೋ ಭವೇತ**(ತಂತ್ರ 1-49)

**ಪೂಜಾಕ್ರಮ**

ಮುಂದೆ ಪೂಜಾಕ್ರಮವನ್ನು 17 ಶ್ಲೋಕಗಳಿಂದ ವಿಸ್ತಾರವಾಗಿ ನಿರೂಪಿಸಿರುತ್ತಾರೆ.

ಜಪಧ್ಯಾನ ಕ್ರಮದ ಫಲಶ್ರುತಿಯನ್ನೂ 5 ಶ್ಲೋಕದಿಂದ ತಿಳಿಸಿ ಈ ಪ್ರಥಮಾಧ್ಯಾಯವನ್ನು ಉಪಸಂಹಾರ ಮಾಡುತ್ತಾರೆ.

**ಪೂಜಾಕ್ರಮ :** ನೈವೇದ್ಯ – ಧೂಪದೀಪ

೧. **ಧೂಪದೀಪಾ ತತೋದತ್ವಾ ನೈವೇದ್ಯಂ ಮೂಲಮಂತ್ರತಃ ।**
**ಅನೇನ ಕ್ರಮಯೋಗೇನ ಜುಹುಯಾತ್ಸಂಸ್ಕೃತೇಽನಲೇ ॥ (೬೬)**

**ವಿವರಣೆ :** ಭಗವಂತನ ಪೂಜೆಯ ಪೂರ್ವದಲ್ಲಿ ಆರಣ ಪೂಜೆ ಮಾಡಿರಬೇಕು. ನಂತರ ಭಗವಂತನಿಗೆ ದೂಪದೀಪಗಳನ್ನರ್ಪಿಸಿ ಅಷ್ಟಾಕ್ಷರ ಮಂತ್ರಗಳಾದ

**"ಓಂನಮೋ ನಾರಾಯಣಾಯ"** ಎಂಬ ಮೂಲಮಂತ್ರ ಸ್ಫಟಿಸಿ ನೈವೇದ್ಯ ದ್ರವ್ಯಗಳನ್ನು ಶಂಕೋದಕವನ್ನು ಕೈಲಿ ಹಿಡಿದು ಪ್ರೋಕ್ಷಿಸಬೇಕು. ಇದೇ ಕ್ರಮದಿಂದ ಸಂಸ್ಕಾರ ಮಾಡಿದ ಅಗ್ನಿಯಲ್ಲಿ ಮತ್ತು ಪರಮಾತ್ಮನನ್ನು ಪೂಜಿಸಿ ನಿತ್ಯ ಹೋಮ ಮಾಡಬೇಕು.

**ಓಂ ನಮೋ ನಾರಾಯಣಾಯೇತಿ ಮೂಲ ಮಂತ್ರಂ ಉದಾಹೃತಃ ॥ –** ಯೋಗದೀಪಕಾ

**೨. ಪುಷ್ಪಾಂಜಲಿಶ್ಚ ಹೋಮಶ್ಚ ಮೂಲೇನಾಷ್ಟೋತ್ತರಂ ಶತಮ್ ।**
**ಸಕೃತ್ ಸಕೃತ್ ಪುಷ್ಪಮನ್ಯೈಃ ಹೋಮಸ್ತಸ್ಯ ಚತುರ್ಗುಣಃ ॥**

**ವಿವರಣೆ :** "ಓಂನಮೋ ನಾರಾಯಣಾಯ" ಎಂಬ ಅಷ್ಟಾಕ್ಷರ ಮಂತ್ರಗಳಿಂದ ಭಗವಂತನಿಗೆ (ಪ್ರತಿಮೆಗಳಲ್ಲಿ) ಪುಷ್ಪಾಂಜಲಿಯನ್ನು ನಂತರ ಅಗ್ನಿಯಲ್ಲಿ ೧೦೮ ಬಾರಿ ಆಜ್ಯ ಹೋಮ ಮಾಡಬೇಕು.

ಉಳಿದ ಮಂತ್ರಗಳಿಂದ ಒಂದೊಂದು ಸಲ ಪುಷ್ಪಾಂಜಲಿಯನ್ನು ನಾಲ್ಕು ಬಾರಿ ಹೋಮಿಸಬೇಕು

(ವಿಶೇಷ) ಮೂಲ ಪ್ರತಿಯಾಂತ ಬಿಂಬಕ್ಕೆ ನೀಡಿದ ನೈವೇದ್ಯವನ್ನು ಅಗ್ನಿಯಲ್ಲಿ ಕೊಡಬೇಕು.

**೩. ವಿಸರ್ಜಯಿತ್ವಾ ನೈವೇದ್ಯಂ ಮೂಲೇನತ್ರಿಃ ಸಮರ್ಜಯ ।**
**ಧೂಪದೀಪೋ ಪುನರ್ದತ್ವ ಪುನರ್ಮಾಲೇನ ಪೂರ್ವವತ್ ॥**
**ಅರ್ಚಯಿತ್ವಾ ಹರಿಃ ಧ್ಯಾತ್ವಾ ಜಪೇದಷ್ಟೋತ್ತರಂ ಶತಮ್ ।**
**ಪುನರ್ಧ್ಯಾಯೇದ್ಧರಿಂ ಸರ್ವದೇವ ದೇವೇಶ್ವರಂ ಪ್ರಭುಮ್ ॥**

**ವಿವರಣೆ :** ನೈವೇದ್ಯವನ್ನು ವಿಸರ್ಜಿಸಿ ಪುನಃ ಮೂಲಮಂತ್ರದಿಂದ ಮೂರು ಸಲ ಪುಷ್ಪಾಂಜಲಿಯನ್ನರ್ಪಿಸಿ ಮತ್ತೆ ಪುನಃ ಧೂಪ ದೀಪಗಳಿಂದ ಪೂಜಿಸಿ ಮತ್ತೆ ಮೂಲ ಮಂತ್ರಗಳಿಂದ ಮೂರು ಬಾರಿ ಪುಷ್ಪಾಂಜಲಿಯನ್ನರ್ಪಿಸಬೇಕು. ೧೦೮ ಬಾರಿ ಮೂಲ ಮಂತ್ರವನ್ನು ಜಪಿಸಬೇಕು. ಆಮೇಲೆ ಹೃದಯದಲ್ಲಿ ಬಿಂಬರೂಪಿ ಪರಮಾತ್ಮನನ್ನು ಆವಾಹನ ಮಾಡಿ ತತ್ಪ್ರಯುಕ್ತ ಸರ್ವೋತ್ತಮನಾದ ಜಗನ್ನಾಥನನ್ನು ಧ್ಯಾನಿಸಬೇಕು.

**ವಿಶೇಷಾಂಶ :** ಆಚಾರ್ಯ ಶ್ರೀಮಧ್ವರು ದೇವಪೂಜಾ ಪದ್ಧತಿಯನ್ನು ಸಂಕ್ಷಿಪ್ತವಾಗಿ ತೋರಿಸಿಕೊಟ್ಟಿದ್ದಾರೆ. ಶ್ರೀ ಜಯತೀರ್ಥ ಶ್ರೀಚರಣರ "ಪದ್ಯಮಾನಾ" ಎಂಬ ಗ್ರಂಥದಲ್ಲಿ ವಿಸ್ತೃತವಾದ ವಿವರಣೆ ಇರುವುದು. ಪ್ರತಿಮಾಗಳಿದ್ದರೆ ಅಭಿಷೇಕಕ್ಕಿಂತ ಪೂರ್ವದಲ್ಲಿ



ತತ್ತ್ವನ್ಯಾಸಾದಿಗಳನ್ನು ಮಾಡಿ ಅಭಿಷೇಕಾ ನಂತರವೂ ತತ್ತ್ವನ್ಯಾಸಾದಿಗಳನ್ನು ಮಾಡಬೇಕು. ನಂತರ ಆವರಣ ಪೂಜಾ. ಧೂಪ ದೀಪ ಸಮರ್ಪಿಸಬೇಕೆಂದು ತಿಳಿಸಲಾಗಿದೆ.

ಪ್ರಥಮಾಧ್ಯಾಯ ಪೂಜಾ ಪದ್ಧತಿಯನ್ನು ಉಪಸಂಹಾರ ಮಾಡುತ್ತಾ ಫಲಶೃತಿಯನ್ನು ಆರು ಶ್ಲೋಕಗಳಿಂದ ವಿವರಿಸುತ್ತಾರೆ.

**೧. ಜಪಧ್ಯಾನ ಹುತಾರ್ಚಾದಿನ್ಯೈವಂ ಯಃ ಕುರುತೇಸದಾ ।**
**ಧರ್ಮಾರ್ಥಕಾಮಮೋಕ್ಷಾಣಾಂ ಭಾಜನಂ ಸ್ವಾತ್ಸ ಏವಹಿ ॥**

ಈ ರೀತಿಯಾಗಿ ಜಪ ಹೋಮಾದಿಗಳನ್ನು ಮಾಡುವವನು ಚತುರ್ಪುರುಷಾರ್ಥಗಳಿಗೆ ಯೋಗ್ಯನಾಗುತ್ತಾನೆ.

**೨. ಸರ್ವೋತ್ತಮಂ ಹರಿಂ ಜ್ಞಾತ್ವಾಯಏವಂ ಭಕ್ತಿಪೂರ್ವಕಮ್ ।**
**ಜಪಧ್ಯಾನಾದಿಭಿರ್ನಿತ್ಯಂ ಪೂಜಯೇನ್ನಾಸ್ಯದುರ್ಲಭಮ್ ॥**

**ವಿವರಣೆ :** ಶ್ರೀಹರಿಯೇ ಸರ್ವೋತ್ತಮನೆಂದು ತಿಳಿದು ಭಗವಂತನನ್ನು ಭಕ್ತಿಪೂರ್ವಕವಾಗಿ ಆರಾಧಿಸಿದ ಪುಣ್ಯಪುರುಷನಿಗೆ ಯಾವುದೂ ದುರ್ಲಭ ಇರುವುದಿಲ್ಲ.

**೩. ಭಕ್ತಿಂ ಕೃತ್ವಾಽನ್ಯದೇಶು ಬ್ರಹ್ಮರುದ್ರಾದಿಕೇಶ್ವಪಿ ।**
**ಸರ್ವೋತ್ಕರ್ಷ ವಿಜ್ಞಾಯ ವಿಷ್ಣೋರ್ಯಾತಿ ತಮೋಧ್ರುವಂ ॥**

ಶ್ರೀಹರಿಯೇ ಸರ್ವೋತ್ತಮನು. ಅನ್ಯದೇವತೆಗಳನ್ನು ಸರ್ವೋತ್ತಮರೆಂದು ತಿಳಿಯಬಾರದೆಂಬುದನ್ನು ಶ್ರೀಮದಾಚಾರ್ಯರು ತಿಳಿಸುತ್ತಾರೆ.

**೪. ನಯಜ್ಞಾನಶ್ಚತೀರ್ಥಾನಿ ನೋಪವಾಸವ್ರತಾನಿ ಚ ।**
**ದೈವತಾನಿಚ ಸರ್ವಾಣಿ ತ್ರಾತುಂ ಶುಕ್ಲಯುಃ ಕ್ವಚಿತ್ ॥**

ಬ್ರಹ್ಮ ರುದ್ರ ಇಂದ್ರ ಗಣೇಶಾದಿಗಳನ್ನು ಸರ್ವೋತ್ತಮತ್ವೇನ ಧ್ಯಾನ ಪೂಜಾದಿಗಳನ್ನು ಮಾಡಬಾರದು. ಆತನು ಹಾಗೆ ಮಾಡಿ ಯಜ್ಞ, ತೀರ್ಥಯಾತ್ರೆ, ವ್ರತ ಉಪವಾಸಗಳಿಂದ ವಿಷ್ಣು ವಿಮುಖನಾದವನನ್ನು ಅವುಗಳು ರಕ್ಷಿಸಲಾರವು.

**ವಿವರಣೆ :** ಹಾಗೆಂದ್ರ ಮಾತ್ರಕ್ಕೆ ರುದ್ರ ಗರುಡ ಶೇಷ ಗಣಪತಿಗಳನ್ನು ಪೂಜೆ ಮಾಡಬಾರದೆಂದು ತಿಳಿಯಬಾರದು. ಆದರೆ ಆಯಾ ದೇವತೆಗಳಲ್ಲಿ ಶ್ರೀಹರಿಯನ್ನು ಅಂತರ್ಯಾಮಿತ್ವೇನ (ರುದ್ರಾಂತರ್ಗತ ಶ್ರೀ ಸಂಕರ್ಷಣ,

ಗಣಪತ್ಯಂತರ್ಗತ ವಿಶ್ವಂಭರನನ್ನು) ಧ್ಯಾನಿಸಿ ಪೂಜೆ ಮಾಡಿದರೆ ಸಕೃತ್ ಫಲಪ್ರದವಾಗುವುದು.

"ಅನ್ಯದೇವದೇವನಮಸ್ಕಾರಾಃ ಕೇಶವಂ ಪ್ರತಿಗಚ್ಛತಿ" ಎಂಬ ಪ್ರಮಾಣಾನುಸಾರ ಶ್ರೀವಿಷ್ಣುವೇ ಸರ್ವೋತ್ತಮನು. ಬಾಕಿ ಎಲ್ಲರೂ ಅವನ ಪರಿವಾರ ದೇವತೆಗಳೆಂಬ ಅನುಸಂಧಾನವಿರಬೇಕು.

**೫. ಹರಿರ್ಹಿಸರ್ವದೇವಾನಾಂ ಪರಮಃ ಪೂರ್ಣ ಶಕ್ತಿಮಾನ್ ।**
**ಸ್ವತಂತ್ರೋಽನ್ಯೇ ತದ್ವಶಾ ಹಿ ಸರ್ವೇಽತಃ ಸ ಜಗದ್ಗುರುಃ ॥**

ಶ್ರೀ ಹರಿಯೇ ಸರ್ವತಂತ್ರಸ್ವತಂತ್ರನು, ಪೂರ್ಣಶಕ್ತನು ಪರಮಶ್ರೇಷ್ಠನು ಎಲ್ಲಾ ದೇವತೆಗಳಿಗೂ ಅತ್ಯುತ್ತಮನು. ಅವರಾದರೋ ಶ್ರೀಹರಿಯ ಚರಣದಾಸರು ಎಂದು ತಿಳಿದು ಈ ಜಗತ್ತಿಗೆ ಅವನೊಬ್ಬನೇ ಗುರುವಾಗಿ ಜಗದ್ಗುರು ಎಂದರೆ ಶ್ರೀಹರಿಯೇ ಎಂದು ಧ್ಯಾನಿಸಬೇಕು. (ಕೃಷ್ಣಂ ವಂದೇ ಜಗದ್ಗುರುಂ)

**೬. ಬ್ರಹ್ಮಾದಯಶ್ಚ ತದ್ಭಕ್ತ್ಯಾ ಭಾಗಿನೋ ಭೋಗಯೋಕ್ಷಯೋಃ ।**
**ತಸ್ಮಾಜ್ಞೇಯಶ್ಚ ಪೂಜ್ಯಶ್ಚ ವಂದ್ಯೋ ಧ್ಯೇಯೋ ಸದಾ ಹರಿಃ ॥**

ಬ್ರಹ್ಮರುದ್ರಾದಿಗಳೂ ಸಹ ಭಗವಂತನ ಆರಾಧನೆ ಮಾಡಿದ್ದರಿಂದ ನಿತ್ಯಸುಖ ಭೋಗವನ್ನು ಅನುಭವಿಸುತ್ತಾರೆ. ಶಾಶ್ವತ ಆನಂದರೂಪ ಮುಕ್ತಿಯನ್ನೂ ಹೊಂದುತ್ತಾರೆ. ಏತಸ್ಮಾತ್ ಕಾರಣದಿಂದ ಶ್ರೀರಮಾರಮಣನ ಮಹಿಮೆಯನ್ನು ತಿಳಿದುಕೊಳ್ಳಬೇಕು. ಅವನನ್ನು ಸದಾ ಪೂಜ ಧ್ಯಾನಾದಿಗಳನ್ನು ಮಾಡಿ ಹೊಂದಿಸಬೇಕು.

**ಸರ್ವೋತ್ತಮಂ ಹರಿಂ ಜ್ಞಾತ್ವಾ ಯ ಏವಂ ಭಕ್ತಿ ಪೂರ್ವಕಮ್**
**ಜಪಧ್ಯಾನಾದಿಭಿರ್ನಿತ್ಯಂ ಪೂಜಯೇನ್ನಾಸ್ಯ ದುರ್ಲಭಮ್**
**ಭಕ್ತಿಂ ಕೃತ್ವಾಽನ್ಯ ದೇವೇಷು ಬ್ರಹ್ಮ ರುದ್ರಾದಿಕೇಷ್ವಪಿ**
**ಸರ್ವೋತ್ಕರ್ಷಮವಿಜ್ಞಾಯ ವಿಷ್ಣೋರ್ಯಾತಿ ತಮೋಧ್ರುವಮ್ ॥**
**ನ ಯಜ್ಞಾ ನಚ ತೀರ್ಥಾನಿ ನೋಪವಾಸವ್ರತಾನಿ ಚ**
**ದೈವತಾನಿ ಚ ಸರ್ವಾಣಿ ತ್ರಾತುಂ ತಂ ಶಕ್ನುಯುಃ ಕ್ವಚಿತ್**
**ಹರಿರ್ಹಿ ಸರ್ವದೇವಾನಾಂ ಪರಮಃ ಪೂರ್ಣ ಶಕ್ತಿಮಾನ್ ।**
**ಸ್ವತಂತ್ರೋಽನ್ಯೇ ತದ್ವಶಾ ಹಿ ಸರ್ವೇಽತಃ ಸ ಜಗದ್ಗುರುಃ ॥**
**ಬ್ರಹ್ಮಾದಯಶ್ಚ ತದ್ಭಕ್ತ್ಯಾ ಭಾಗಿನೋ ಭೋಗ ಮೋಕ್ಷಯೋಃ ।**
**ತಸ್ಮಾಜ್ಞೇಯಶ್ಚ ಪೂಜ್ಯಶ್ಚ ವಂದ್ಯೋ ಧ್ಯೇಯಃ ಸದಾ ಹರಿಃ ॥**



**ವಿವರಣೆ :** ಶ್ರೀ ಹರಿಯೇ ಸರ್ವೋತ್ತಮನೆಂದು ತಿಳಿದು ಭಕ್ತಿಪೂರ್ವಕ ಪರಮಾತ್ಮನನ್ನು ಜಪಧ್ಯಾನ ಆರಾಧನೆಯನ್ನು ಮಾಡುವ ಪುಣ್ಯ ಪುರುಷನಿಗೆ ಯಾವ ರೀತಿಯ ದುರ್ಲಭವು ಇರುವುದಿಲ್ಲ. ತದ್ವಿರುದ್ಧವಾಗಿ ಯಾರಾದರೂ ಬ್ರಹ್ಮರುದ್ರಾದಿಗಳನ್ನು ಸರ್ವೋತ್ತಮತ್ವೇನ ಭಜಿಸುವವರು ತಮಸ್ಸನ್ನೆ ಹೊಂದುತ್ತಾರೆ. ಯಜ್ಞ, ಪುಣ್ಯತೀರ್ಥಗಳಲ್ಲಿ ಮಜ್ಜನ, ವ್ರತ, ಉಪವಾಸ, ದಾನಾದಿಗಳನ್ನು ಯಾರೇ ಮಾಡಿದರೂ ಅವರು ದೇವತೆಗಳೂ ಆಗಿರಬಹುದು. ವಿಷ್ಣು ವಿಮುಖರಾದವರನ್ನು ರಕ್ಷಿಸಲಾಗುವುದಿಲ್ಲ.

ಶ್ರೀ ಹರಿಯೇ ಜಗತ್ತಿಗೆ ಗುರು, ಸರ್ವಶ್ರೇಷ್ಠನು, ಶಕ್ತಿವಂತನು, ಸ್ವತಂತ್ರನು ಎಂದು ತಿಳಿದು ಅನ್ಯರೆಲ್ಲಾ ಶ್ರೀ ಹರಿಯ ಚರಣದಾಸರೆಂದು ತಿಳಿಯಬೇಕು.

ಬ್ರಹ್ಮದೇವರೂ ಸಹ ಭಗವಂತನನ್ನು ಆರಾಧಿಸುತ್ತಾರಾದ್ದರಿಂದ ಸುಖ ಭೋಗವನ್ನು ಅನುಭೋಗಿಸುತ್ತಾರೆ. ಆದ್ದರಿಂದ ಶ್ರೀ ಹರಿಯ ಮಹಿಮೆಯನ್ನು ಚೆನ್ನಾಗಿ ತಿಳಿದು ಅವನನ್ನೇ ಸದಾ ಪೂಜೆ ಮಾಡಬೇಕು.

**2. ಎರಡನೆ ಅಧ್ಯಾಯ**ದಲ್ಲಿ ಶ್ರೀಮದಾಚಾರ್ಯರು ಪ್ರಥಮತಃ ಮಂತ್ರ ಸಿದ್ಧಿಸಬೇಕಾದರೆ ಮಂತ್ರ ಜಪಿಸುವ ಪೂರ್ವದಲ್ಲಿ ಮಾತೃಕಾನ್ಯಾಸವನ್ನೂ ಮಾಡಬೇಕೆಂದಿದ್ದಾರೆ.

**ಯಸ್ಯ ಕಸ್ಯಾಪಿ ಮಂತ್ರಸ್ಯ ನ್ಯಾಸಃ ಪಂಚಾಶದಕ್ಷರೈಃ**
**ವೀರ್ಯದಃ ಕೇಽಭಿತೋವಕ್ತ್ರ ಮಕ್ಷಿ ಕರ್ಣೇಷು ನಾಸಯೋಃ ॥**
**ಗಂಡಯೋರೋಷ್ಠಯೋರ್ದಂತ ಪಂಕ್ತ್ಯೋರ್ಮೂರ್ಧನಿ ವಾಚಿ ಚ ।**
**ದೋಃಪತ್ಸಂಧಿಷು ಸಾಗ್ರೇಷು ಪಾರ್ಶ್ವಯೋಃ ಪೃಷ್ಠಗುಹ್ಯಯೋಃ ॥**
**ತುಂದೇ ಚ ಹೃದಿ ಧಾತೂನಾಂ ಸಪ್ತಕೇ ಪ್ರಾಣಜೀವಯೋಃ ।**

**ವಿವರಣೆ :** ಯಾವ ಮಂತ್ರವನ್ನಾಗಲಿ ಜಪಿಸುವ ಪೂರ್ವದಲ್ಲಿ ನ್ಯಾಸಗಳನ್ನು ಮಾಡಬೇಕು. ಇದರಿಂದ ವಿಶೇಷ ಫಲದಾಯಕವಾಗುವುದು.

**ನ್ಯಾಸ** – ಏನು ಹಾಗೆಂದರೆ ?

ನಿಘಂಟುವಿನಲ್ಲಿ ನ್ಯಾಸ = ಇಡುವುದು. ನಿಕ್ಷೇಪ

ಶರೀರದ ವಿವಿಧ ಅಂಗಗಳಲ್ಲಿ ವಾಸಿಸುವ ದೇವತೆಗಳನ್ನು ಉದ್ದೇಶಿಸಿ ಮಂತ್ರೋಚ್ಚಾರಣೆ ಮಾಡುವ ಕಾರ್ಯ

ಇನ್ನಷ್ಟು ವಿವರಣೆ – ಪೃಥಿವ್ಯಾದಿ ದೇವತೆಗಳು (ಆಕಾಶಾತ್ ವಾಯುಃ ವಾಯೋರಗ್ನಿಃ ಅಗ್ನೇರಾಪಃ ಅದ್ಭ್ಯ ಪೃಥಿವೀ (ಪೃಥಿವ್ಯಾ ಅಂತರಿಕ್ಷ)

| ಪಂಚಭೂತಗಳು | ತನ್ಮಾತೃಗಳು | ಅಭಿಮಾನಿ ದೇವತೆಗಳು |
|---|---|---|
| ಆಕಾಶಾ | ಶಬ್ದ | ಗಣೇಶ |
| ವಾಯು | ಸ್ಪರ್ಶ | ಪ್ರವಾಹ (ಅಹಂಕಾರಿಕ ವಾಯು) |
| ಅಗ್ನಿ | ರೂಪ | ವಹ್ನಿ |
| ಆಪ | ರಸ | ವರುಣ |
| ಪೃಥಿವೀ | ಗಂಧ | ಧರಾದೇವಿ / ಶನೀಶ್ವರ |

ಇವುಗಳಲ್ಲಿ **ಆಕಾಶ** ಮತ್ತು **ವಾಯು** ಅಮೂರ್ತಗಳು (ಅಂದರೆ ರೂಪದಿಂದ ಕಾಣಲಾಗುವುದಿಲ್ಲ) **ಅಗ್ನಿ , ಅಪ್**(ನೀರು), **ಪೃಥಿವೀ** ಈ ಮೂರು ಮೂರ್ತಗಳು.

| ಜ್ಞಾನೇಂದ್ರಿಯಗಳು ಐದು. | **ಅಭಿಮಾನಿ ದೇವತೆಗಳು** |
|---|---|
| ೧. ಚಕ್ಷು (ಕಣ್ಣು) | ಸೂರ್ಯ ಚಂದ್ರರು |
| ೨. ಶ್ರೋತ್ರೇಂದ್ರಿಯ (ಕಿವಿ) | ದಿಗ್ದೇವತೆಗಳು |
| ೩. ಘ್ರಾಣ (ಮೂಗು ೨ ಹೊಳ್ಳೆ) | ಅಶ್ವಿನಿದೇವತೆಗಳು |
| ೪. ನಸೇಂದ್ರಿಯ (ಜಿಹ್ವಾ ನಾಲಗೆ) | ವರುಣ |
| ೫. ತ್ವಕ್ (ಚರ್ಮ) | ಪ್ರಾಣ (ಅಹಂಕಾರಿಕ ಪ್ರಾಣ) |

ಕರ್ಮೇಂದ್ರಿಯಗಳು ಐದು. ಇವುಗಳಿಂದ ದೇಹ ಕೆಲಸ ಮಾಡುವುದು.

| **ಕರ್ಮೇಂದ್ರಿಯಗಳು** | **ಅಭಿಮಾನಿ ದೇವತೆಗಳು** |
|---|---|
| ೧. ವಾಕ್ (ಮಾತನಾಡುವುದು – ನಾಲಗೆ) | ವಹ್ನಿದೇವತಾ |
| ೨. ಪಾಣಿ (ಕರಗಳು – ಕೈ) | ದಕ್ಷಪ್ರಜಾಪತಿ |
| ೩. ಪಾದ (ಕಾಲುಗಳು) | ಜಯಂತ |
| ೪. ಪಾಯು (ಮಲಮೂತ್ರ ವಿಸರ್ಜನೆ) | ಮಿತ್ರ |
| ೫. ಉಪಸ್ಥಾ (ಗುಹ್ಯೇಂದ್ರಿಯ) | ಮನು/ಧರ್ಮರಾಜ |

**ತತ್ವಾನ್ಯಾಸ ಮಾಡಬೇಕಾದ ದೇಹೇಂದ್ರಿಯಗಳು**

ತತ್ವಾಭಿಮಾನಿ ದೇವತೆಗಳು ಒಟ್ಟು ೨೪ ತತ್ವಗಳು

| | | | | | |
|---|---|---|---|---|---|
| ಆಕಾಶಾದಿ | ೫ | ಜ್ಞಾನೇಂದ್ರಿಯ | ೫ | ಕರ್ಮೇಂದ್ರಿಯ | ೫ |
| ತನ್ಮಾತ್ರಗಳು | ೫ | ತದಭಿಮಾನಿಗಳು | ೫ | | |
| ಒಟ್ಟು | ೨೪ | ಶ್ರೀಮನ್ನಾರಾಯಣನೇ ೨೫ನೇ ಮುಖ್ಯ ತತ್ವ. | | | |

ಶ್ರೀಮದಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ತಿಳಿಸಿದಂತೆ ನ್ಯಾಸಃ ಪಂಚಾದಶಕ್ಷರೈಃ ಈ ಕೆಳಗಿನ ರೀತ್ಯಾ ತತ್ವಾನ್ಯಾಸ ಮಾಡಬೇಕು. ತತ್ಪೂರ್ವದಲ್ಲಿ **ಪ್ರಾಣಾಯಾಮ** ''ಓಂ ನಮೋ ನಾರಾಯಣಾಯ ನಮಃ'' ಎಂದು ೧೨ ಸಲ ಜಪಿಸಬೇಕು.



## ತತ್ವಾನ್ಯಾಸ ಕ್ರಮ

### ೧. ಹೃದಯಾದಿ ಅಂಗನ್ಯಾಸ

ಓಂ ಭೂಃ ಅಗ್ನ್ಯಾತ್ಮನೇ **ಶ್ರೀ ಅನಿರುದ್ಧಾಯ ನಮಃ**

ಓಂ ಭುವಃ ವಾಯ್ವಾತ್ಮನೇ **ಶ್ರೀ ಪ್ರದ್ಯುಮ್ನಾಯ ನಮಃ**

ಓಂ ಸ್ವಃ ಸೂರ್ಯಾತ್ಮನೇ **ಶ್ರೀ ಸಂಕರ್ಷಣಾಯ ಶಿಖಾಯೈವಷಟ್**

ಓಂ ಭೂರ್ಭವಸುವಃ ಪ್ರಜಾಪ್ರತ್ಯಾತ್ಮನೇ **ಶ್ರೀವಾಸುದೇವಾಯ ಕವಚಾಯಹುಂ**

ಓಂ ಸತ್ಯಾತ್ಮನೇ **ಶ್ರೀನಾರಾಯಣಾಯ ಅಸ್ತ್ರಾಯ ಫಟ್ ಇತಿ ದಿಗ್ಬಂಧಃ**

**ಏತೇಷಾಂ ತತ್ವಮಂತ್ರಾಣಾಂ ಅಂತರ್ಯಾಮಿ ಋಷಿಃ ॥ ದೇವೀ ಗಾಯತ್ರೀ ಛಂದಃ ಮುಖೇ ಶ್ರೀನಾರಾಯಣೋದೇವತಾ ಹೃದಯಧ್ಯಾನೇ** ವಿನಿಯೋಗಃ

### ೨. ತತ್ವನ್ಯಾಸ ಧ್ಯಾನ ಮಂತ್ರಾಃ

**ಪ್ರಧಾನೋಪವರ್ಣಾನಿ ದ್ವಿಭುಜಾನ್ಯವ್ಯಶೇಷತಃ**

**ಕೃಪಾಂಜಲೀಪುಟಾನ್ಯೈವ ಪ್ರಧಾನಂ ತಂ ಹರಿಃ ಪ್ರತಿ ॥**

**ತತ್ವಾಂತರ್ಯಾಮಿ ಶ್ರೀನಾರಾಯಣ ಪ್ರೇರಣಯಾ ಶ್ರೀನಾರಾಯಣ ಪ್ರೀತ್ಯರ್ಥಂ ತತ್ವಾನ್ಯಾಸಮಹಂಕರಿಷ್ಯೇ ।**

**ಸೂಚನೆ** : ಪೃಥಿವ್ಯಾದಿ ದೇವತೆಗಳಿಗೆ ತದಭಿಮಾನಿ ದೇವತೆಗಳೂ ಜೀವನ ಶರೀರದಲ್ಲಿದ್ದು ಆಯಾ ಸ್ಥಾನಗಳಲ್ಲಿ ನೆಲಸಿ ಜೀವನು ಮಾಡುವ ಸರ್ವ ಕಾರ್ಯಗಳಿಗೆ ಪ್ರೇರಕರಾಗಿರುತ್ತಾರೆ. ಈ ದೇವತೆಗಳಲ್ಲಿ ಶ್ರೀಹರಿಯೇ ಮುಖ್ಯ ಪ್ರೇರಕ ಅಂತರ್ಯಾಮಿ ಎಂಬುದನ್ನು ಅನುಸಂಧಾನ ಮಾಡುವುದೇ ತತ್ವಾನ್ಯಾಸ.

**ಜೀವನ ಅಶ್ವಾಂತಂತ್ಯವನ್ನು ತಿಳಿಯುವುದು. (ಇಲ್ಲಿ ಒಂದು ಸಂಶಯದ ಪ್ರಶ್ನೆ)**

ಜೀವನು ಅಸ್ವತಂತ್ರನು. ಏನೇ ಮಾಡಿದರೂ ಅಭಿಮಾನಿ ದೇವತೆಗಳು. ಅವರಲ್ಲಿಯೂ ಶ್ರೀಹರಿ ಅಂತರ್ಯಾಮಿತ್ವೇನ ಕಾರ್ಯ ಕರ್ಮಗಳನ್ನು ಮಾಡಿಸುತ್ತಾನೆಂದ ಮೇಲೆ ಪಾಪಕರ್ಮ ಮಾಡಿದಾಗ ಜೀವನು ಸ್ವತಂತ್ರವಾಗಿ ಏನೂ ಮಾಡುವುದಿಲ್ಲ. ದೇವತೆಗಳ ಪ್ರೇರಣೆಗೆ ಅನುಸಾರವಾಗಿಯೇ ಆಗುವುದಲ್ಲಾವೆಂಬ ಅನುಮಾನ ಬರುವುದು ಸಹಜವೇ. ಪುಣ್ಯ ಪಾಪಕರ್ಮಗಳು ಜೀವನಿಂದ ಸ್ವತಂತ್ರವಾಗಿ ಮಾಡದಿದ್ದಾಗ ಅವುಗಳ ಫಲ ಭೋಗ ಅವನಿಗೇಕೆ ?

**''ಪಾಪ ಪುಣ್ಯಕ್ಕೆಲ್ಲಾ ಅನಲಾಕ್ಷ ನಿನ್ನ ಪ್ರೇರಣೆ ಇಲ್ಲದೇ''** ಎಂಬ ಶ್ರೀವಿಜಯದಾಸರ ವಾಕ್ಯವು ಪುಷ್ಟೀಕರಿಸುವುದಿಲ್ಲವೇ ?

**ಸಮಾಧಾನ :** ಯದ್ಯಪಿ ಜೀವನಿಗೆ ಕರ್ಮ ಮಾಡುವುದರಲ್ಲಿ ಸ್ವಾತಂತ್ರ್ಯವಿರುವುದಿಲ್ಲ. ಆದರೆ ಜೀವನಿಗೆ ಭಗವಂತ ಕಿಂಚಿತ್ ಸ್ವಾತಂತ್ರ್ಯ ಕೊಟ್ಟಿರುತ್ತಾನೆ. ಅದನ್ನು **ದತ್ತ**

**ಸ್ವಾತಂತ್ರ್ಯ**ವೆನ್ನುವುದು. ನಾನು ಏನು ಮಾಡಿದರೂ ದೇವತಾ ಪ್ರೇರಣೆ ಅಂತ ಹೇಳಿ ಸ್ವೇಚ್ಛಾಚಾರವಾಗಿ ಮಾಡಲಾಗದು.

ಇಲ್ಲಿ ವಿಷಯವೇನೆಂದರೆ ದೇಹಾಂತರ್ಯಾಮಿ ದೇವತೆಗಳು ಮುಖ್ಯ ಪ್ರಾಣ ಮತ್ತು ಶ್ರೀಹರಿ ಸ್ವತಂತ್ರನಾಗಿ ಮಾಡಿಸುತ್ತಾರೆ. ನಿಜ. ಆದರೆ ತ್ರಿವಿಧ ಜೀವರ ಸ್ವರೂಪಕ್ಕನುಗುಣವಾಗಿ ತಕ್ಕಂತೆ ಕರ್ಮ ಮಾಡಿಸುತ್ತಾನೆ (ರೆ). ಸಾತ್ವಿಕ, ರಾಜಸ, ತಾಮಸ ಜೀವರು ಇರುತ್ತಾರೆಂದು ಶಾಸ್ತ್ರವು ಸಾರುತ್ತಿದೆ. (ಗುಣತ್ರಯ ವಿಭಾಗ ಯೋಗ ಭ.ಗೀ. ಯಲ್ಲಿ ಕಾಣಬಹುದು)

ಸಾತ್ವಿಕರಿಗೆ ಸಾತ್ವಿಕ ಪ್ರೇರಣೆ, ರಾಜಸರಿಗೆ ರಾಜಸಪ್ರೇರಣೆ, ತಾಮಸರಿಗೆ ತಾಮಸ ಪ್ರೇರಣೆ ಹೀಗೆ ಶಾಸ್ತ್ರಸಿದ್ಧ ಅನುಭವವೂ ಹೌದು. ಅಂದ ಮೇಲೆ ತತ್ವಾನ್ಯಾಸವು ಸಾತ್ವಿಕರೇ ಅನುಸಂಧಾನ ಮಾಡಿ ದೇಹ (ಜೀವ) ದುರಭಿಮಾನ ಮಾಡಿ ಎಲ್ಲಾ ಸತ್ಕರ್ಮಗಳು ದೇವತಾಂತರ್ಯಾಮಿ ಶ್ರೀಮನ್ನಾರಾಯಣನೇ ಪ್ರೇರಕನಾಗಿರುತ್ತಾನೆ ಎಂಬ ಭಾವನೆಯಿಂದ ಪೂಜಾದಿಗಳನ್ನು ಮಾಡುವುದೇ ತತ್ವಾನ್ಯಾಸ. **"ಜಗವನ್ ಯನ್ಮಯಾ ಕರ್ಮ ಶುಭಂ ಕಾರಯುಸೇಪ್ರಭೋ । ತತ್ಸರ್ವಂ ವಿಷ್ಣುಪೂಜಾಸ್ತು ತವದೇವಪ್ರಸಾದತಃ ।"** ಎಂದು ಹೇಳುತ್ತೇವೆ.

ಈ ರೀತಿ ಅನುಸಂಧಾನ ರಾಜಸ ತಾಮಸರಿಗೆ ಇರುವುದಿಲ್ಲ. ಅವರ ಸ್ವರೂಪಕ್ಕನುಗುಣವಾಗಿ ಪ್ರೇರಣೆ ಇರುವುದು. ನ್ಯಾಸ ಒಂದು ಕರ್ಮ. ಅದರಲ್ಲಿ ಕಾಲಹರಣ ಮಾಡದೇ ಶ್ರೀಹರಿಯಲ್ಲಿ ಭಕ್ತಿಪೂರ್ವವಾಗಿರಬೇಕು. ಭಕ್ತಿಯೇ ಮುಖ್ಯ, ಅಂತೆ ಮಾಡುವ ಪೂಜೆ ಆರಾಧನೆಗಳಲ್ಲಿ ಪೂರ್ವ ಮತ್ತು ಅನಂತರ ತತ್ವಾನ್ಯಾಸ ಮಾಡಬೇಕು. ಇದು ಶ್ರೀಮದಾಚಾರ್ಯರ ಆದೇಶ ಬೋಧನೆ.

ಹಿಂದೆ ಇದಕ್ಕೆ ನನ್ನ ಗುರುಗಳು ಸೂಕ್ತ ಸಮಂಜಸ Convincing Reply ಒಂದು ಉದಾಹರಣೆಯಿಂದ ಹೇಳಿದರು. ಅನ್ನ ಮಾಡಲು ಅಕ್ಕಿಯನ್ನು ನೇರವಾಗಿ ಒಲೆಯ ಮೇಲೆ ಇಡುವುದಿಲ್ಲ. ಅಕ್ಕಿ ನೀರಿನಲ್ಲಿ ನೆನೆಸಿ ನೀರಿನಲ್ಲಿ ಹಾಕುತ್ತೇವೆ. ನೀರು ಒಂದು ಪಾತ್ರೆಯಲ್ಲಿ ಇಡಲಾಗುವುದು. ಆ ಪಾತ್ರೆ ಒಲೆಯ ಮೇಲಿಡುತ್ತೇವೆ. ಆಗ ಬೆಂಕಿಯ ಕಾವು ಪಾತ್ರೆಗೆ ನಂತರ ಪಾತ್ರೆಯಲ್ಲಿರುವ ನೀರು ಕುದಿಯುವುದು. ಕುದಿಯುತ್ತಿರುವ ನೀರಿನಲ್ಲಿ ತೊಳೆದ ಅಕ್ಕಿ ಹಾಕುತ್ತೇವೆ. ನೀರಿನ ಕುದಿಯಿಂದ ಅಕ್ಕಿ ಬೆಂದು ಅನ್ನವಾಗುತ್ತೆ. ಹೌದೋ ಅಲ್ಲವೋ ? ಬೆಂಕಿಗೂ ಅಕ್ಕಿಗೂ ನೇರ ಸಂಪರ್ಕವಿಲ್ಲದಿದ್ದರೂ ಅಕ್ಕಿ ಬೆಂದು ಅನ್ನವಾಗುವುದು. ಜೀವನಿಗೂ ಕರ್ಮಗಳಿಗೂ ನೇರ ಸಂಪರ್ಕವಿರುವುದಿಲ್ಲ. ಜೀವನಿಗೂ ದೇಹಕ್ಕೂ ಸಂಬಂಧವಾಗುವುದು. ಇದೇ ರೀತಿ ಶರೀರದಿಂದ ಮಾಡಿದ ಕರ್ಮ ಅಭಿಮಾನದಿಂದ ಜೀವನಿಗೆ ಅದರ ಕಾವು ತಗಲುತ್ತದೆ.



**ಅಜೋ ನಿತ್ಯೋ ಶಾಶ್ವತೋಽಯಂ ಪುರಾಣೋ**
**ನಹನ್ಯತೇ ಹನ್ಯಮಾನೇಽಪಿದೇಹೇ ॥** (ಕಾಠ.ಉ. ೧.೨.೧೮)

ಶ್ರೀ ಕೃಷ್ಣ ಗೀತೆಯಲ್ಲಿಯೂ ಇದನ್ನೇ ಹೇಳಿರುತ್ತಾನೆ. ಜ್ಞಾನಿಯಾದವನು ಈ ಶರೀರ ಬೇರೆ, ನಾನು ಬೇರೆ ಅಂತ ದೇಹಾಭಿಮಾನ ಬಿಟ್ಟು ದೇಹಾಭಿಮಾನಿ ದೇವತೆಗಳಲ್ಲಿ ಅಂತರ್ಯಾಮಿಯಾದ ಶ್ರೀಹರಿಯಲ್ಲಿ ಶರಣಾಗತರಾದರೆ ತತ್ವದೇವತೆಗಳು ನಮ್ಮಿಂದ (ಶರೀರ) ದುಷ್ಕರ್ಮ ಎಂದಿಗೂ ಮಾಡಿಸುವುದಿಲ್ಲ. ಹಾಗೆ ಕೆಟ್ಟ ಕೆಲಸ ಯೋಚನೆ ಮಾಡಿಸಬೇಡಿರಿ ಅಂತ ಅವರಲ್ಲಿ ಪ್ರಾರ್ಥಿಸಿ ಬೇಡಿಕೊಳ್ಳಬೇಕು.

**ನಮೋಸ್ತು ತಾತ್ವಿಕಾ ದೇವಾಃ ವಿಷ್ಣುಭಕ್ತಿ ಪರಾಯಣಾಃ ।**
**ಧರ್ಮಮಾರ್ಗೇ ಪ್ರೇರಯಂತು ಭವಂತಃ ಸರ್ವತಃ ॥**

## ತತ್ವಾನ್ಯಾಸ

**ಶಕ್ತಿಃ ಪ್ರತಿಷ್ಠಾ ಸಂವಿಚ್ಚ ಸ್ಫೂರ್ತಿ ಪ್ರವೃತ್ತಿರೇವ ಚ ।**
**ಕಲಾ ವಿದ್ಯಾಮತಿ ರ್ನಿಯತಿರ್ಮಾಯಾ ಕಾಲೋಹಿ ಪುರುಷಃ**

ಓಂ ಪರಯಾ ಶಕ್ತ್ಯಾತ್ಮನೇ ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಓಂ ಪರಯಾ ಪ್ರತಿಷ್ಠಾತ್ಮನೇ ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಓಂ ಪರಯಾ ಸಂವಿಧಾತ್ಮನೇ ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಓಂ ಪರಯಾ ಸ್ಫೂರ್ತ್ಯಾತ್ಮನೇ ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಓಂ ಪರಯಾ ಪ್ರವೃತ್ತ್ಯಾತ್ಮನೇ ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಓಂ ಪರಯಾ ಕಲಾತ್ಮನೇ ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಓಂ ಪರಯಾ ವಿದ್ಯಾತ್ಮನೇ ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಓಂ ಪರಯಾ ಮತ್ಯಾತ್ಮನೇ ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಓಂ ಪರಯಾ ನಿಯತಾತ್ಮನೇ ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಓಂ ಪರಯಾ ಮಾಯಾತ್ಮನೇ ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಓಂ ಪರಯಾ ಕಾಲಾತ್ಮನೇ ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ
ಓಂ ಪರಯಾ ಪುರುಷಾತ್ಮನೇ ಬ್ರಹ್ಮವಾಯುಭ್ಯಾಂ ನಮಃ

ಈ ೧೨ ರೂಪಗಳನ್ನು ಹೇಳುತ್ತಾ ಒಂದು ತುಳಸೀದಳ ಹಿಡಿದು ಹೃದಯದಲ್ಲಿ ಮಾಲಾಕಾರವಾಗಿ ನ್ಯಾಸ ಮಾಡಬೇಕು.

ಓಂ ಪರಯಾ ಅವ್ಯಕ್ತಾತ್ಮನೇ ಬ್ರಹ್ಮಣೇ ಭಾರತೀಭ್ಯಾಂ ನಮಃ **(ಬಲಭುಜ)**
ಓಂ ಪರಯಾ ಮಹದಾತ್ಮನೇ ಬ್ರಹ್ಮವಾಯುಭ್ಯಾಂ ನಮಃ **(ಎಡಭುಜ)**

ಓಂ ಪರಯಾ ಅಹಂಕಾರಾತ್ಮನೇ ಗರುಡ ಶೇಷ ರುದ್ರಾಭ್ಯಾಂ ನಮಃ **(ಬಲ ತೊಡೆ)**
ಓಂ ಪರಯಾ ಮನಆತ್ಮನೇ ಸ್ಕಂದೇಂದ್ರಾಭ್ಯಾಂ ನಮಃ **(ಎಡತೊಡೆ)**

---

ಓಂ ಪರಯಾ ಶ್ರೋತ್ರಾತ್ಮನೇ ದಿಗ್ದೇವತಾಭ್ಯಾಂ ನಮಃ **(ಬಲಕೈ ಹೆಬ್ಬೆರಳು)**
ಓಂ ಪರಯಾ ತ್ವಗಾತ್ಮನೇ ಪ್ರಾಣಾಯ (ಅಹಂಕಾರಿಕ) ನಮಃ **(ಬಲಕೈ ಎರಡನೇ ಬೆರಳು)**
ಓಂ ಪರಯಾ ಚಕ್ಷುರಾತ್ಮನೇ ಸೂರ್ಯಾಯನಮಃ **(ಬಲಕೈ ಮಧ್ಯ ಬೆರಳು)**
ಓಂ ಪರಯಾ ಜಿಹ್ವಾತ್ಮನೇ ವರುಣಾಯನಮಃ **(ಬಲಕೈ ನಾಲ್ಕನೇ ಬೆರಳು)**
ಓಂ ಪರಯಾ ಘ್ರಾಣಾತ್ಮನೇ ಅಶ್ವನೀಭ್ಯಾಂನಮಃ **(ಬಲಕೈ ಕಿರುಬೆರಳು)**

---

ಓಂ ಪರಯಾ ವಾಗಾತ್ಮನೇ ವಹ್ನೆ ನಮಃ **(ಎಡಕೈ ಹೆಬ್ಬೆರಳು)**
ಓಂ ಪರಯಾ ಪಾಣ್ಯಾತ್ಮನೇ ದಕ್ಷಾಯನಮಃ **(ಎಡಕ್ಕೈ ಎರಡನೇ ಬೆರಳು)**
ಓಂ ಪರಯಾ ಪಾದಾತ್ಮನೇ ಜಯಂತಾಯನಮಃ **(ಎಡಕೈ ಮಧ್ಯ ಬೆರಳು)**
ಓಂ ಪರಯಾ ಪಾಯ್ವಾತ್ಮನೇ ಮಿತ್ರಾಯನಮಃ **(ಎಡಕೈ ನಾಲ್ಕನೇ ಬೆರಳು)**
ಓಂ ಪರಯಾ ಉಪಸ್ಥಾತ್ಮನೇ ಮನವೇನಮಃ **(ಎಡಕೈ ಕಿರುಬೆರಳು)**

---

ಓಂ ಪರಯಾ ಶಬ್ದಾತ್ಮನೇ ಬೃಹಸ್ಪತಿ ಪ್ರಾಣಾಭ್ಯಾಂ ನಮಃ **(೧ನೇ ಬಲಪಾದ ಹೆಬ್ಬೆರಳು)**
ಓಂ ಪರಯಾ ಸ್ಪರ್ಷಾತ್ಮನೇ ಅಪಾನಾಯ ನಮಃ **(೨ನೇ ಬಲಪಾದ ಬೆರಳು)**
ಓಂ ಪರಯಾ ರೂಪಾತ್ಮನೇ ವ್ಯಾನಾಯ ನಮಃ **(೩ನೇ ಬಲಪಾದ ಬೆರಳು)**
ಓಂ ಪರಯಾ ರಸಾತ್ಮನೇ ಉದಾನಾಯನ ನಮಃ **(೪ನೇ ಬಲಪಾದ ಬೆರಳು)**
ಓಂ ಪರಯಾ ಗಂಧಾತ್ಮನೇ ಸಮಾನಾಯ ನಮಃ **(೫ನೇ ಬಲಪಾದ ಕಿರುಬೆರಳು)**

---

ಓಂ ಪರಯಾ ಆಕಾಶಾತ್ಮನೇ ಗಣೇಶಾಯ ನಮಃ **(೧ನೇ ಎಡಪಾದ ಹೆಬ್ಬೆರಳು)**
ಓಂ ಪರಯಾ ವಾಯ್ವಾತ್ಮನೇ ಪ್ರವಾಹ ವಾಯವೇ ನಮಃ **(೨ನೇ ಎಡಪಾದ ಬೆರಳು)**
ಓಂ ಪರಯಾ ತೇಜಾತ್ಮನೇ ವಹ್ನೆ ನಮಃ **(೩ನೇ ಎಡಪಾದ ಬೆರಳು)**
ಓಂ ಪರಯಾ ಅಬಾತ್ಮನೇ ವರುಣಾಯ ನಮಃ **(೪ನೇ ಎಡಪಾದ ಬೆರಳು)**
ಓಂ ಪರಯಾ ಪೃಥಿವ್ಯಾತ್ಮನೇ ಶನೇಶ್ವರಧರಾಭ್ಯಾಂನಮಃ **(೫ನೇ ಎಡಪಾದ ಕಿರುಬೆರಳು)**

ಹೀಗೆ ಮಂತ್ರೋಚ್ಚಾರಣೆಯಿಂದ ಆಯಾ ಅವಯವಗಳ ಕಡೆ ಕೈತೋರಿಸುತ್ತಾ ನ್ಯಾಸ ಮಾಡಬೇಕು. ಕೊನೆಯಲ್ಲಿ ಅನೇನ ತತ್ವಾನ್ಯಾಸೇನ ಭಗವಾನ್ ತತ್ವಾಂತರ್ಯಾಮಿ ಶ್ರೀನಾರಾಯಾಣ ಪ್ರೀಯತಾಂ ಪ್ರೀತೋರ್ಭವತು ಶ್ರೀಮಧ್ವೇಶಾರ್ಪಣಮಸ್ತು, ಎಂದು



ಹೇಳಿ ತತ್ವಾನ್ಯಾಸ ಮಾಡಿದ ಫಲವನ್ನು ಶ್ರೀಹರಿಗೆ ಅರ್ಪಿಸಬೇಕು. ಇಲ್ಲಿಗೆ ತತ್ವಾನ್ಯಾಸ ಮುಗಿಯಿತು.

ಮುಂದೆ **ಮಾತೃಕಾನ್ಯಾಸ** ಮಾಡಬೇಕು. ಮಾತೃಕಾನ್ಯಾಸ ಅಂದರೆ **ಅ** ಇಂದ **ಕ್ಷ** ರವರೆಗೆ ಅಕ್ಷರಗಳು. (ಕ್ಷರ ಎಂದರೆ ನಾಶ, ಅಕ್ಷರ–ನಾಶವಿಲ್ಲದ ನಿತ್ಯ. **ಅ** ಇಂದ **ಕ್ಷ** ವರೆಗಿನ ವರ್ಣಗಳು ನಿತ್ಯ. ಅದಕ್ಕಾಗಿ ಭಗವಂತನನ್ನು ಅಕ್ಷರನೆಂದು ಕರೆಯಲಾಗುವುದು.) ಈ ಎಲ್ಲಾ ಅಕ್ಷರಗಳನ್ನು ಭಗವಂತನಲ್ಲಿ ಅನುಸಂಧಾನ ಮಾಡುವುದು. ಅಕ್ಷರಾದಿ ವರ್ಣಗಳು (ಅಕ್ಷರಾಣಾಂ ಅಕಾರೋಸ್ಮಿ) ಎಂದು ಗೀತೆಯಲ್ಲಿ ಶ್ರೀಕೃಷ್ಣ ಹೇಳಿದ್ದಾನೆ. ಸರ್ವ ಅಕ್ಷರ, ವರ್ಣ, ಧ್ವನಿ ಭಗವಂತನನ್ನೇ ತಿಳಿಸುವುದು. ಹೀಗೆ ಅಕ್ಷರಗಳಲ್ಲಿ ಭಗವದ್ರೂಪಗಳನ್ನು ಧ್ಯಾನ ಮಾಡುವುದೇ **ಮಾತೃಕಾನ್ಯಾಸ.**

**ಮಾತೃಕಾನ್ಯಾಸ**

**ಓಂನಮೋ ನಾರಾಯಣಾಯ** ಎಂಬ ಮೂಲಮಂತ್ರದಿಂದ **ಪ್ರಾಣಾಯಾಮ** ಮಾಡಿಕೊಳ್ಳಬೇಕು.

**ಮಂತ್ರ** ಏತೇಷಾಂ ಮಾತೃಕಾ ಮಂತ್ರಾಣಾಂ ಅಂತರ್ಯಾಮಿ ಋಷಿಃ ಶಿರಸೀ। ದೈವೀ ಗಾಯತ್ರೀ ಛಂದಃ ಮುಖೇ। ಅಜಾದಿರೂಪಿ ಶ್ರೀನಾರಾಯಣೋ ದೇವತಾ ಹೃದಯೇ ಧ್ಯಾನೇ ವಿನಿಯೋಗಃ।

**ಓಂ ತಾದ್ರೂಗ್ರೂಪಾಶ್ಚ ಪಂಚಾಶಜ್ಞಾನ ಮುದ್ರಾಭಯೋದ್ಯತಾಃ। ಟಂಕೀ ದಂಡೀ ಚ ಧನ್ವೀ ಚ ತತ್ತದ್ಯುಕ್ತಾಸ್ತು ವಾಮತಃ। ಅಜಾದಿರೂಪಿ ಶ್ರೀನಾರಾಯಣ ಪ್ರೇರಣಯಾ ಶ್ರೀನಾರಾಯಣ ಪ್ರೀತ್ಯರ್ಥಂ ಮಾತೃಕಾನ್ಯಾಸಮಹಂ ಕರಿಷ್ಯೇ ॥** ಎಂದು ಹೇಳಿ ಆರಂಭಿಸಬೇಕು.

ಓಂ ಅಂ ಅಜಾಯನಮಃ (ಶಿರಸ್ಸು)
ಓಂ ಆಂ ಆಂನದಾಯ ನಮಃ (ಮುಖ)
ಓಂ ಇಂ ಇಂದ್ರಾಯ ನಮಃ (ದಕ್ಷಿಣ ನೇತ್ರ)
ಓಂ ಈಂ ಈಶಾನಾಯ ನಮಃ (ವಾಮನೇತ್ರ)
ಓಂ ಉಂ ಉಗ್ರಾಯ ನಮಃ (ದಕ್ಷಿಣ ಕರ್ಣೇ)
ಓಂ ಊಂ ಊರ್ಜಾಯ ನಮಃ (ವಾಮ ಕರ್ಣೇ)
ಓಂ ಋಂ ಋತುಂಭರಾಯ ನಮಃ (ದಕ್ಷಿಣನಾಶ ಪುಟೀ)
ಓಂ ೠಂ ೠಘಾಯ ನಮಃ (ವಾಮನಾಸ ಪುಟೀ)
ಓಂ ಌಂ ಌಶಾಯನಮಃ (ದಕ್ಷಿಣ ಕಪೋಲೇ)

ಓಂ ಲ್ಯಾಂ ಲ್ಯಾಜಾಯೇನಮಃ (ವಾಮ ಕಪೋಲೇ)
ಓಂ ಏಂ ಏಕಾತ್ಮನೇ ನಮಃ (ಊರ್ಧ್ವೋಷ್ಠೇ)
ಓಂ ಐಂ ಐರಾಯನಮಃ (ಅಧರೋಷ್ಠೇ)
ಓಂ ಓಂ ಓಜಭೃತೇ ನಮಃ (ಊರ್ಧ್ವದಂಕ್ತೌ)
ಓಂ ಔಂ ಔರಸಾಯ ನಮಃ (ಅಧರದಂಕ್ತ ಪಂಕ್ತೌ)
ಅಂ ಅನಂತಾಯ ನಮಃ (ಮೂರ್ಧ್ನಿ)
ಅಃ ಅರ್ಧಗರ್ಭಾಯ ನಮಃ (ವಾಚೀ)
ಓಂ ಕಂ ಕಪಿಲಾಯ ನಮಃ (ಬಲಗೈ ಸಂಧಿಷು)
ಓಂ ಖಂ ಖಪತೇ ನಮಃ (ಬಲಗೈ ಸಂಧಿಷು)
ಓಂ ಗಂ ಗರುಡಾಯ ನಮಃ (ಬಲಗೈ ಸಂಧಿಷು)
ಓಂ ಘಂ ಘುರ್ಮಾಯ ನಮಃ (ಬಲಗೈ ಸಂಧಿಷು)
ಓಂ ಙಂ ಙಸಾರಾಯ ನಮಃ (ಬಲಗೈ ಸಂಧಿಷು)
ಓಂ ಚಂ ಚರ್ವಾಂಗಾಯ ನಮಃ (ಎಡಗೈ ಸಂಧಿಷು)
ಓಂ ಛಂ ಛಂದೋಗ್ಯಾಯ ನಮಃ (ಎಡಗೈ ಸಂಧಿಷು)
ಓಂ ಜಂ ಜನಾರ್ದನಾಯ ನಮಃ (ಎಡಗೈ ಸಂಧಿಷು)
ಓಂ ಝಂ ಝುಟಿತಾರಾಯ ನಮಃ (ಎಡಗೈ ಸಂಧಿಷು)
ಓಂ ಞಂ ಞಮಾಯ ನಮಃ (ಎಡಗೈ ಸಂಧಿಷು)
ಓಂ ಟಂ ಟಂಕಿನೇ ನಮಃ (ಬಲಗಾಲು ಸಂಧಿಷು)
ಓಂ ಠಂ ಠರಕಾಯ ನಮಃ (ಬಲಗಾಲು ಸಂಧಿಷು)
ಓಂ ಡಂ ಡರಕಾಯ ನಮಃ (ಬಲಗಾಲು ಸಂಧಿಷು)
ಓಂ ಢಂ ಢರಿಣೇ ನಮಃ (ಬಲಗಾಲು ಸಂಧಿಷು)
ಓಂ ಣಂ ಣಾತ್ಮನೇ ನಮಃ (ಬಲಗಾಲು ಸಂಧಿಷು)
ಓಂ ತಂ ತಾರಾಯ ನಮಃ (ಎಡಗಾಲು ಸಂಧಿಷು)
ಓಂ ಥಂ ಥಪಾಯ ನಮಃ (ಎಡಗಾಲು ಸಂಧಿಷು)
ಓಂ ದಂ ದಂಡಿನೇ ನಮಃ (ಎಡಗಾಲು ಸಂಧಿಷು)
ಓಂ ಧಂ ಧನ್ವಿನೇ ನಮಃ (ಎಡಗಾಲು ಸಂಧಿಷು)
ಓಂ ನಂ ನಮ್ಯಾಯ ನಮಃ (ಎಡಗಾಲು ಸಂಧಿಷು)
ಓಂ ಪಂ ಪರಾಯ ನಮಃ (ಬಲಕಣ್ಣು)



ಓಂ ಫಂ ಫಲಿನೇ ನಮಃ (ಎಡಗಣ್ಣು)
ಓಂ ಬಂ ಬಲಿನೇ ನಮಃ (ಪೃಷ್ಠ)
ಓಂ ಭಂ ಭಗಾಯ ನಮಃ (ಗುಹ್ಯೇ)
ಓಂ ಮಂ ಮನವೇ ನಮಃ (ಉದರೆ)
ಓಂ ಯಂ ಯಜ್ಞಾಯ ನಮಃ (ಹೃದಯ)
ಓಂ ರಂ ರಾಮಾಯ ನಮಃ (ತ್ವಚೆ)
ಓಂ ಲಂ ಲಕ್ಷ್ಮೀಪತೆಯ ನಮಃ (ಚರ್ಮ)
ಓಂ ವಂ ವರಾಹಾಯ ನಮಃ (ರುಧರೇ)
ಓಂ ಶಂ ಶಾಂತಸಂವಿಧೇ ನಮಃ (ಮಾಂಸ)
ಓಂ ಷಂ ಷಡ್ಗುಣಾತ್ಮನೇ ನಮಃ (ಮೇಧಸ್ಸು)
ಓಂ ಸಂ ಸಾರಾತ್ಮನೇ ನಮಃ (ಮಜ್ಜಾಯಾಂ)
ಓಂ ಹಂ ಹಂಸಾಯ ನಮಃ (ಅಸ್ತಿ ಸಂಧಿಷು)
ಓಂ ಳಂ ಳಾಳುಕಾಯ ನಮಃ (ಸ್ನಾಯ್ರೋ)
**ಓಂ ಕ್ಷಂ ಶ್ರೀಲಕ್ಷ್ಮೀನರಸಿಂಹಾಯ ನಮಃ (ಸರ್ವಸ್ಮಿನ್ ಪ್ರಾಣೇ)**

ಇಷ್ಟು ಮಾತೃಕಾನ್ಯಾಸ ಮಾಡಿ ಪುನಃ ಆಚಮನ, ಪ್ರಾಣಾಯಾಮ ಮಾಡಬೇಕು. ನಂತರ ಮಾತೃಕಾನ್ಯಾಸ ಮಾಡಿದ ಫಲವನ್ನು ಶ್ರೀ ನಾರಾಯಣನಿಗೆ ಸಮರ್ಪಿಸಬೇಕು. ಇದಕ್ಕೆ ಮಂತ್ರ : ಅನೇನ ಮಾತೃಕಾನ್ಯಾಸೇನ ಅಜಾದಿರೂಪಿ ಶ್ರೀ ಲಕ್ಷ್ಮೀನಾರಾಯಣಃ ಪ್ರಿಯತಾಂ ಪ್ರೀತೋರ್ಭವತು । ಶ್ರೀ ಕೃಷ್ಣಾರ್ಪಣಮಸ್ತು

**ವಿಶೇಷ :** ಮೇಲೆ ತಿಳಿಸಿದ ಅಕ್ಷರಗಳು **(ಮಾತೃಕಾಗಳು)** ಭಗವಂತನ ನಾಮಗಳೇ ಆಗಿವೆ. ಅತಿ ಪ್ರಾಚೀನ ತಂತ್ರ ಗ್ರಂಥಗಳಲ್ಲಿ ಉಲ್ಲೇಖಿಸಿರುವುದು ಶ್ರೀಮದಾಚಾರ್ಯರ ಸಂಗ್ರಹವೇ ಆಗಿರುತ್ತೆ. ಯಾವ ವರ್ಣಗಳೂ ಅರ್ಥಹೀನವಾಗಿರುವುದಿಲ್ಲ. ಸರ್ವಜ್ಞಾಚಾರ್ಯರೇ ತಿಳಿಸಿದ್ದರಿಂದ ಪ್ರಮಾಣತ್ವೇನ ಸ್ವೀಕರಿಸಬೇಕು.

ಇನ್ನೊಂದು ಮುಖ್ಯ ವಿಷಯ ತತ್ವಾನ್ಯಾಸ, ಮಾತೃಕಾನ್ಯಾಸ, ಪ್ರಾಣಾಯಾಮ, ಹೃದಯಾದಿನ್ಯಾಸ ಇವನ್ನು ಯಾವಾಗ ಮಾಡಬೇಕು ಎನ್ನುವ ಪ್ರಶ್ನೆಗೆ ಸಾಂಪ್ರದಾಯಸ್ಥರು ತಿಳಿಸಿದುದನ್ನೇ ಇಲ್ಲಿ ಕೊಡಲಾಗಿದೆ.

೧. ಪೂಜಾ ಪ್ರಾರಂಭದಲ್ಲಿ, ಸಂಧ್ಯಾವಂದನೆ ಪೂರ್ವದಲ್ಲಿ, ಪಾಪ ಪುರುಷ ವಿಸರ್ಜನೆಯ ನಂತರ **ತತ್ವಾನ್ಯಾಸ, ಮಾತೃಕಾನ್ಯಾಸ** ಮಾಡಬೇಕು. ಆಮೇಲೆ ಪೂಜಾ

ನಂತರ ಪುನಃ ನ್ಯಾಸಗಳನ್ನು ಮಾಡಿಕೊಳ್ಳಬೇಕು. ಸಂಪ್ರದಾಯ ತಿಳಿದು ಆಚರಿಸಬೇಕು.

೨. ತತ್ವಾನ್ಯಾಸ, ಮಾತೃಕಾನ್ಯಾಸ, ಹೃದಯಾನ್ಯಾಸ ಮಾಡಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಹೆಚ್ಚೆಂದರೆ ೧೦ ರಿಂದ ೧೫ ನಿಮಿಷಗಳು ಆಗುತ್ತೆ. ಈ ರೀತಿ ಮಾಡುವುದರಿಂದ ಮುಖ್ಯವಾಗಿ **'ನಾನು'** ಎಂಬ ದುರಭಿಮಾನ ಹೋಗಿ ಶ್ರೀಹರಿಯೇ ಸರ್ವತಂತ್ರ ಕರ್ತ, ನಾನು ಅವನ ಕಿಂಕರನಾಗಿ ಪೂಜಾದಿಗಳನ್ನು ಮಾಡುವೆನು ಎಂಬ ಅನುಸಂಧಾನವಿರಬೇಕು. **ಮಾಡಿಸುವವನು ಅವನೇ** ಆದರೆ ನಾನು ಮಾಡುವವನು ಎಂಬ ಭಾವನೆ ಇರಬೇಕು.

೩. ಇಲ್ಲಿ ತಾರತಮ್ಯೋಪೇತವಾಗಿ ಎಲ್ಲಾ ದೇವತೆಗಳನ್ನು ಸ್ಮರಿಸಬೇಕೆಂಬುದು ಮುಖ್ಯ ತಾತ್ಪರ್ಯ.

ಇದನ್ನೇ ತಂತ್ರಸಾರ ಸಂಗ್ರಹದಲ್ಲಿ ವಿಪುಲವಾಗಿ ತಿಳಿಸಲಾಗಿದೆ. ಯಥಾಶಕ್ತಿಮತಿಯಿಂದ ಪರಮಾತ್ಮನ ಕರುಣೆಗೆ ಪಾತ್ರರಾಗಬೇಕು.

ಪ್ರಾಣಾಯಾಮ, ತತ್ಫಲವನ್ನು ತಿಳಿಸಿ ಈ ಹಿಂದೆ ತಿಳಿಸಿದಂತೆ ಹೋಮ ಪದ್ಧತಿ, ವಿಧಾನ, ಕುಂಡಗಳ ವಿವರಣೆ ಕೊಟ್ಟಿರುವುದು ಉಪಮಾರಹಿತವಾಗಿರುತ್ತೆ.

**ಪ್ರಾಣಾಯಾಮ** ಎಂಬುದನ್ನು ವಿವರಿಸಲಾಗಿದೆ.

Pranayama - an act of restraining the mental resitation of the names or attributes of deity (V.A. Apte) **ಪ್ರಾಣಾಯಾಮ**ದ ವಿಷಯವಾಗಿ ಯೋಗಶಾಸ್ತ್ರದಲ್ಲಿ ಪ್ರಾಣಾಯಾಮ ಲಕ್ಷಣವನ್ನು ಹೇಳಲ್ಪಟ್ಟಿದೆ. "ಶ್ವಾಸಪ್ರಶ್ವಾಸ ಯೋರ್ಗತಿ ವಿಚ್ಛೇದಃ" ಪ್ರಾಣಾಯಾಮವನ್ನು ನಿರೋಧಿಸುವುದು. ಶ್ವಾಸವನ್ನು ತಡೆದು ನಿಲ್ಲಿಸುವುದು. ಪ್ರಾಣ ಆಯಮ್ಯಂತೇಽನೇನ" – ಆ+ಯಮ ಅಷ್ಟಾಂಗ ಯೋಗದ ಒಂದು ಅಂಗ.

ಜಗತ್ತಿನಲ್ಲಿ ಶರೀರ ಮತ್ತು ಪ್ರಾಣಾಯಾಮಗಳ ಸಂಬಂಧವೇ ಜೀವನ. ಇಲ್ಲಿಯವರೆಗೂ ಪ್ರಾಣವಾಯು ಈ ಶರೀರದಲ್ಲಿರುವಷ್ಟು ಕಾಲ ಮನುಷ್ಯ ಜೀವಿಸಿರುತ್ತಾನೆ. ಯಾವಾಗ ಪ್ರಾಣವಾಯು (ಮುಖ್ಯ ಪ್ರಾಣದೇವರು) ಶರೀರದಿಂದ ನಿರ್ಗಮಿಸುತ್ತಾರೋ ಆಗ ಮರಣವು ಸಿದ್ಧ. **"ಮುಖ್ಯಪ್ರಾಣನು ತೊಲಗಲು ದೇಹವನ್ನು ಅರಿತು ಪೆಣನೆಂದು ಪೇಳ್ವರು ಬುಧರು"** (ಶ್ರೀಪಾದರಾಜರ ಮಧ್ವನಾಮ – ೩)



ಜ್ಞಾನಿಯಾದವನು ಪ್ರಾಣವಾಯುವನ್ನು ದೇಹದಲ್ಲಿ ತಡೆದು ನಿಲ್ಲಿಸಿದಷ್ಟು ಕಾಲ ಆಯುಃ ಪ್ರಮಾಣ ಹೆಚ್ಚುವುದು. ಅದು ಹೇಗೆಂದರೆ ಉಪಾಯಃ ಪ್ರಾಣಾಯಾಮ ಮಾಡುವುದು.

ನಾಡಿಗಳು ದೇಹದೊಳಗೆ ಮಲದಿಂದ ವ್ಯಾಪ್ತವಾಗಿರುವುದರಿಂದ ಪ್ರಾಣವಾಯು ಸುಷುಮ್ನಾ ಮಾರ್ಗದಲ್ಲಿ ಪ್ರವಹಿಸುವುದಿಲ್ಲ. ನಾಡಿ ಚಕ್ರವು ಶುದ್ಧವಾಗಿದ್ದರೆ ಮಾತ್ರ ಪ್ರಾಣವಾಯುವು ಯೋಗಿಗೆ ಸುಗಮವಾಗುವುದು.

**ಪ್ರಾಣಾಯಾಮಂ ತತಃ ಕುರ್ಯಾನ್ನಿತ್ಯಂ ಸಾತ್ವಿಕಯಾಧಿಯಾ**
**ಯಥಾ ಸುಷುಮ್ನಾ ನಾಡಿ ಸ್ಥೂಮಲಾಃ ಶುದ್ಧಿಂ ಪ್ರಾಯಂತಿ ಚ ।**
(ಹಠಯೋಗ ದೀಪಿಕಾಃ ೨–೮)

**ಪ್ರಾಣಾಯಾಮ ಲಕ್ಷಣ ಅಧಿಕಾರಿ**

ಮಂತ್ರ ಜಪಗಳನ್ನು ಪೂಜಾ ಕಾಲಕ್ಕೆ ಅರ್ಹತೆ ಪಡೆಯಬೇಕಾದರೆ ಪ್ರಾಣಾಯಾಮ ಅವಶ್ಯ ಮಾಡಬೇಕು.

**ಪ್ರಾಣಾಯಾಮಂ ವಿನಾಮಂತ್ರ ಪೂಜನೇನ ಹೇ ಯೋಗ್ಯತಾ**

ಪ್ರಾಣಾಯಾಮವನ್ನು ಗುರುಮುಖೇನ ಉಪದಿಷ್ಟಿತವಾಗಿರಬೇಕು. ಆಗ ಮಾತ್ರ ಮಂತ್ರಸಿದ್ಧಿ ಹೊಂದುವುದು. ಅಲ್ಲದೇ ಇಂತು ಉಪದೇಶ ಹೊಂದಿದ ಪ್ರಾಣಾಯಾಮದಿಂದ ಸಮಸ್ತವಾದ ರೋಗಗಳು ನಿವಾರಿಸಬಹುದು. **"ಪ್ರಾಣಾಯಾಮೇನ ಯುಕ್ತೇನ ಸರ್ವರೋಗಕ್ಷಯೋ ಭವೇತ್ । ಆಯುಕ್ತಾಭ್ಯಾಸಯುಕ್ತೇನ ಸರ್ವರೋಗ ಸಮುದ್ಭವಃ॥"**

ಒಂದು ಎಚ್ಚರದ ಮಾತು. ಅಂರೋಗ್ಯ ಆಯುಕ್ತರಿಂದ ಅಭ್ಯಸಿಸಿದರೆ ರೋಗಾದಿ ಉಪದ್ರವಗಳು ಹುಟ್ಟುವುದು. ಈಗಂತು ಯೋಗಾಭ್ಯಾಸ, ಪ್ರಾಣಾ–ಯಾಮ ಇತ್ಯಾದಿ ಅನೇಕ ಸಂಘಗಳು ಹುಟ್ಟಿಕೊಂಡಿರುತ್ತೆ. ಇದರಿಂದ ತಕ್ಕ ಫಲ ಲಭಿಸದು.

**ಪ್ರಾಣಾಯಾಮ ವಿಧಾನ**

**ಪ್ರಾಣಾಯಾಮ ಅನ್ನುವುದರ ಅರ್ಥ ವಿವರಣೆ**

ಅ) ಪ್ರಾಣ = ಪ್ರಾಣವಾಯುವನ್ನು (ಉಸಿರನ್ನು)

ಆ) ಯಾಮ = ಯಮ, ನಿರೋಧಿಸುವುದು ಬಿಗಿ ಹಿಡಿಯುವುದು To control

one's breath - restricting the breath inside one's heart atleast for one ಯಾಮ. ಯಾಮ = means 3 hours one eighth part of a day.

ಇದನ್ನೇ ಆತ್ಮ ಸಂಯಮವೆನ್ನಲಾಗಿದೆ. ಮನೋನಿಗ್ರಹ ಮಾಡಿದರೆ ಬಾಕಿ ಇಂದ್ರಿಯಗಳು ತಾನಾಗಿಯೇ ಹತೋಟಿಗೆ ಬಂದು ನಿಶ್ಚಲವಾಗಿ ಒಂದು ಯಾಮ ಪರ್ಯಂತ ಪ್ರಾಣವಾಯುವನ್ನು ತಡೆಹಿಡಿಯುವುದು.

**ಇಂದ್ರಿಯಾಣಾಂ ನಿರೋಧೇನ ರಾಗದ್ವೇಕ್ಷಯೇಣ ಚ**
**ಅಹಿಂಸಯಾ ಚ ಭೂತಾನಾಂ ಅಮೃತತ್ವಾಯ ಕಲ್ಪತೇ (ಮನು ೬-೬೦)**

**"ಓಂನಮೋ ನಾರಾಯಣಾಯ ಓಂ"** ಎಂಬ ಮೂಲಮಂತ್ರದಿಂದ ೧೬ ಸಲ ಜಪಿಸಬೇಕು. ಆಗ ಎಡ ಮೂಗಿನಿಂದ ವಾಯುವನ್ನು ತುಂಬಬೇಕು. ಇದನ್ನೇ **ಪೂರಕ** ಎನ್ನಲಾಗುವುದು. ನಂತರ ೬೪ ಸಲ ಜಪಿಸಿ ವಾಯುವನ್ನು ಉದರದಲ್ಲಿ ತಡೆದು ನಿಲ್ಲಿಸುವುದೇ **ಕುಂಭಕ**ವು. ಆಮೇಲೆ ೩೨ ಸಲ ಜಪಿಸಿ ತುಂಬಿದ್ದ ವಾಯುವನ್ನು (ಉಸಿರನ್ನು) (೧) ಬಲ ಮೂಗಿನ ಹೊಳ್ಳೆಯಿಂದ ಹೊರಗೆ ಹಾಕುವುದು **ರೇಚಕ**ವೆನ್ನಲಾಗುವುದು. ಮತ್ತೆ ಬಲ ಮೂಗಿನ ಹೊಳ್ಳೆಯಿಂದ ವಾಯುವನ್ನು ತುಂಬಬೇಕು. (೨) ಎರಡೂ ಮೂಗಿನಿಂದ ತಡೆದು ಇಡಬೇಕು. ನಂತರ ವಾಮನಾಸಿಕ(ಎಡಮೂಗು)ದಿಂದ ಉಸಿರನ್ನು ಹೊರಗೆ ಬಿಡಬೇಕು. (೩) ಪುನಃ ಎಡಮೂಗಿನ ಹೊಳ್ಳೆಯಿಂದ ವಾಯುವನ್ನು ತುಂಬಿಸಬೇಕು, ತಡೆದು ನಿಲ್ಲಿಸಬೇಕು. ಆಮೇಲೆ ಬಲಮೂಗಿನಿಂದ ಉಸಿರನ್ನು ನಿಧಾನವಾಗಿ ಬಿಡಬೇಕು. **ಈ ರೀತಿ ಮೂರು ಸಲ** ಮಾಡುವುದನ್ನು ಪ್ರಾಣಾಯಾಮವೆನ್ನಲಾಗುವುದು.

ಹೀಗೆ ಮೂರು ಸಲ ಶ್ವಾಸೋಚ್ಛ್ವಾಸಗಳಿಗೆ ಎಷ್ಟು ಸಮಯಬೇಕಾಗುತ್ತದೆ ? ೧೧೨ + ೧೧೨ + ೧೧೨ = ೩೩೬ ಸಲ ಜಪಿಸಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಹೆಚ್ಚೆಂದರೆ ಅರ್ಧ ತಾಸು ಆಗುವುದು.

**ಒಂದು ಮುಖ್ಯ ವಿಷಯ :** ಪ್ರಾಣಾಯಾಮ ಮಾಡುವಾಗ ಸಮಯ ಗಂಟೆಯನ್ನೇ ನೋಡುತ್ತಾ ಗಣನೆಗೆ ತೆಗೆದುಕೊಳ್ಳದೇ **"ಓಂನಮೋ ನಾರಾಯಣಾಯ ಓಂ"** ಎಂಬುದನ್ನು ಜಪಿಸುತ್ತಾ **(ಅರ್ಥಾನುಸಂಧಾನಪೂರಕವಾಗಿ)** ಭಕ್ತಿಯಿಂದ ಏಕಾಗ್ರ ಚಿತ್ತರಾಗಿ ಜಪಿಸಬೇಕು.

**ಇಂತಹ ಧ್ಯಾನ**(ಪ್ರಾಣಾಯಾಮ)ವನ್ನು **ಬಹಿರಂಗ ಸಾಧನ**ವೆನ್ನಲಾಗಿದೆ. ಇಂತಹ ಭಗವದ್ವಿಷಯುಕ ಜ್ಞಾನಪೂರ್ವಕ (ಅಂದರೆ ಪರಮಾತ್ಮನ ಮಹಿಮಾ ಚಿಂತಿಸುತ್ತಾ) ಶ್ವಾಸನಿರೋಧ ಮಾಡುವುದೇ ಪ್ರಾಣಾಯಾಮವೆಂದು



ತಿಳಿಯಬೇಕು. ಪ್ರಾಣಾಯಾಮ ಅಂದರೆ **ಪ್ರಾಣ** = ಮುಖ್ಯಪ್ರಾಣದೇವರು **ಯಾಮ** = ಪರಮಾತ್ಮನಲ್ಲಿ ಸದಾ ಸ್ಮರಣೆವುಳ್ಳವರಾಗಿರುತ್ತಾರೆ ಎಂಬ ಅನುಸಂಧಾನ ಮಾಡಬೇಕು.

ಭಗವಂತನ ಮಹಿಮಾ ಚಿಂತನೆ ಇಲ್ಲದ ಪ್ರಾಣಾಯಾಮ ಕೇವಲ ಯಾಂತ್ರಿಕವಾಗುವುದೇ ವಿನಃ ಫಲಪ್ರದವಾಗಲಾರದು. ಪ್ರಾಣಾಯಾಮಕ್ಕೆ ಮುಖ್ಯ ಅಧಿಕಾರಿ, ಜಿತೇಂದ್ರಿಯನಾಗಿ ಮೇಲೆ ತಿಳಿಸಿದ ರೀತ್ಯಾ ಶ್ವಾಸೋಚ್ಛ್ವಾಸಗಳನ್ನು ನಿಗ್ರಹಿಸಲು ಮೊದಲು ಶುಚಿಯಾದ ಪ್ರದೇಶದಲ್ಲಿ ಏಕಾಂಗಿಯಾಗಿ ಪದ್ಮಾಸನಾ ರೂಢನಾಗಿ ಶುದ್ಧವಾದ ಆಸನದ ಮೇಲೆ ಕುಳಿತಿರಬೇಕು.

ಶ್ರೀಕೃಷ್ಣ ಗೀತೆಯಲ್ಲಿ ಇದನ್ನೇ ವಿವರಿಸುತ್ತಾನೆ.

**ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ ।**
**ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ**

**ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ ।**
**ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನಕುಶೋತ್ತರಮ್**

**ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ ।**
**ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ**

**ಸಮಂ ಕಾಯಶಿರೋಗ್ರೀವಂ ಧಾರಮನ್ನಚಲಂ ಸ್ಥಿರಃ ।**
**ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್**

**ಪ್ರಶಾಂತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ ।**
**ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ**

**(ಭಗವದ್ಗೀತ ಅ ೬ : ೧೦-೧೪)**

ಹೀಗೆ ಐದು ಶ್ಲೋಕಗಳಿಂದ ಯೋಗೀ (ಪ್ರಾಣಾಯಾಮ ಮಾಡುವವನಲ್ಲಿ) ಇರಬೇಕಾದ್ದು ಎಂದು ತಿಳಿಸುತ್ತಾನೆ.

**ವಿವರಣೆ :** ಪ್ರಾಣಾಯಾಮ ಮಾಡುವವನು (ಜ್ಞಾನಸಾಧನೆ ಬಯಸುವವನು) ಏಕಾಂತದಲ್ಲಿ ನಿರ್ಜನ ಪ್ರದೇಶ(ಅಂದರೆ ಅರಣ್ಯಕ್ಕೆ ಹೋಗಬೇಕೆಂದು ತಿಳಿಯಬಾರದು. ಮನೆಯಲ್ಲಿಯೇ ಒಂದು ಉತ್ತಮ ಪ್ರಶಸ್ಥ ಸ್ಥಳವನ್ನು ಆರಿಸಿ)ದಲ್ಲಿ ಕುಳಿತು ತನ್ನ ಶರೀರ ಮನಸ್ಸುಗಳನ್ನು ಹತೋಟಿಯಲ್ಲಿಟ್ಟುಕೊಂಡು ಯಾವ ವಿಷಯಾಸಕ್ತಿ ಇಲ್ಲದೆ ಭಗವಂತನನ್ನು ಧ್ಯಾನಿಸಬೇಕು. ಮುಖ್ಯ ಪವಿತ್ರ ಸ್ಥಳ, ಆಸನ (**ಕುಶಾಸನ** ಅಥವಾ

**ಕೃಷ್ಣಾಜಿನ** ಅದರ ಮೇಲೆ ವಸ್ತ್ರಗಳನ್ನು ಹಾಕಿರಬೇಕು). ಆಸನವು ಅತಿ ಎತ್ತರವಾಗಿಯೂ, ಅತಿಕೆಳಗೂ **(ನೀಚವಾಗಿಯೂ)** ಇರಬಾರದು. ಇಂತಹ ಆಸನಾರೂಢನಾಗಿ ಏಕಾಗ್ರ ಮನಸ್ಸಿನಿಂದ ಅತ್ತ ಇತ್ತ ದಿಕ್ಕುಗಳನ್ನು ನೋಡದೇ ಮನೆಕಡೆ ಚಿಂತೆ ಈಗಲಾದರೂ ವಿಚಾರಿಸದೇ ಧ್ಯಾನ ಮಾಡಬೇಕು ಎಂದು ತಿಳಿದಾಗ ಪರಪುರುಷಾರ್ಥ ಲಭಿಸುವುದು.

ಇಂತಹ ಪ್ರಾಣಾಯಾಮ(ಧ್ಯಾನ)ದಿಂದ ಲಭಿಸುವ ಆನಂದವು ಅತಿ ವಿಲಕ್ಷಣ. ಇದನ್ನೇ ಶ್ರೀಮದ್ಭಾಗವತದಲ್ಲಿ ಧ್ರುವರಾಜರು **''ಯಾನಿವೃತ್ತಿಃ ತನುಭೃತಾಂ ತವವಾದ ಪದ್ಮಧ್ಯಾನಾತ್ ಭವಜ್ಜನ ಕಥಾಶ್ರವಣೇ ನವಾಸ್ಯಾತ್ । ಸಾ ಬ್ರಹ್ಮಣಿ ಸ್ವಮಹಿಮಾನ್ಯಪಿ ನಾಥ ಮಾಭೂತ್ ಕಿಂ ವ್ಯಂತಕಾಸಿ ಬಲಿತಾತ್ ಫತತಾಂ ವಿಮಾನಾತ್॥''**

ಇಂತು ಪ್ರಾಣಾಯಾಮ ಧ್ಯಾನವು ಭಗವಂತನ ವರಪ್ರಸಾದದಿಂದಲೇ ಸಾಧ್ಯ. ಮನಸ್ಸು ಮನನವು ಶ್ರವಣ ಬೇಕು. ಆಗಮಾತ್ರ ಯಾಮವೇ ಆಗಲಿ, ಧ್ಯಾನವೇ ಆಗಲಿ ಶುದ್ಧವಾಗುವುದು.

## ಪ್ರಾಣಾಯಾಮ ಕಾಲ

ಪದ್ಮಾಸನಾಸ್ಥನಾಗಿ **ಇಡೀ ಸುಷುಮ್ನಾ ಪಿಂಗಳ**ಗಳಿಂದ ಶ್ವಾಸೋಚ್ಛ್ವಾಸ ಮಾಡಬೇಕು. ನಾಡಿಗಳು ಮುಖ್ಯ **ಸುಷುಮ್ನಾ** (Spinal Cord) **ಇಡೀ ದೇಹದ ಎಡಭಾಗಕ್ಕೆ** ಇರುವ ನಾಡಿ. ಪಿಂಗಳ ಬಲಭಾಗದಲ್ಲಿ ಹರಿಯುವ ನಾಡಿಗಳು.

ಹೀಗೆ ಶ್ರೀಮದಾಚಾರ್ಯರು ತಂತ್ರಸಾರ ಸಂಗ್ರಹದಲ್ಲಿ ಪ್ರಾಣಾಯಾಮದ ಬಗ್ಗೆ ಸಂಕ್ಷೇಪವಾಗಿ ತಿಳಿಸಿರುವುದನ್ನು ಇಲ್ಲಿ ಸ್ವಲ್ಪ ವಿಸ್ತಾರವಾಗಿ ವಿವರಿಸಲಾಗಿದೆ. (ಯೋಗದೀಪಿಕಾ, ಹಠಯೋಗ, ಭಗವದ್ಗೀತ ಆಧಾರದಿಂದ ಬರೆಯಲಾಗಿದೆ.)

## ನಾಡಿಗಳು

ನಾಡಿ ಪ್ರಕಾಶ ಗ್ರಂಥದಲ್ಲಿ ಮೂರುವರೆ ಕೋಟಿಗಳು ದೇಹದಲ್ಲಿರುವುದಾಗಿ ತಿಳಿಸುತ್ತದೆ. ಆದರೆ ಪ್ರಧಾನವಾಗಿ **ಹದಿನಾರು ನಾಡಿಗಳನ್ನು ತಿಳಿಯಬಹುದು.** ಇಡಾ, ಪಿಂಗಳ, ಸುಷುಮ್ನಾ, ಗಾಂಧಾರಿ, ಹಸ್ತಿಜಿಹ್ವಾ, ಪೋಷ, ವಶಾವಶ, ಅಲಂಬುಷ, ಕುಹೂ, ಶಾಂಭನಿ, ತಾಲುಜಿಹ್ವಾ, ಇಭಜಿಹ್ವಾ, ಜಯಾ, ಕಾಮದಾ, ಅಮೃತಾ, ಬಹುಲಾ. ಕಾಟಕೋಪನಿಷತ್ತಿನಲ್ಲಿ **''ಶತಂ ಚೈಕಾ ಹೃದಯಸ್ಯ ನಾಡ್ಯಾ । ಸ್ತಾನಾಂ ಮೂರ್ಧನಮಭಿ ನಿಃ ಸೃತೈಕಾ । ತಯೋರ್ಧ್ವಮಾಯನ್ನಮೃತತ್ವಮೇತಿ । ವಿಷ್ವಗನಾ ಉತ್ಕ್ರಮಣೇಭವಂತಿ॥''**

**ವಿವರಣೆ** : ಎಲ್ಲ ನಾಡಿಗಳಿಗೂ ಹೃದಯವು ಮೂಲ ಸ್ಥಾನವೆಂದೂ ಹೃದಯದಲ್ಲಿ



೧೦೧ ನಾಡಿಗಳು ಆಶ್ರಯ ಹೊಂದಿರುವುದೆಂದೂ, ಜೀವನು (ಪ್ರಾಣವು) ಉತ್ಕ್ರಮಣ ಸಮಯದಲ್ಲಿ ಸುಷುಮ್ನಾ ನಾಡಿ ೧೦೧ನೆಯ ಮೂಲಕ ಊರ್ಧ್ವ ಮುಖವಾಗಿ ಶಿರಸ್ಸನ್ನು ಭೇದಿಸಿ ಹೊರಟವನು ವೈಕುಂಠವನ್ನು ಕುರಿತು ಹೊರಡುತ್ತಾನೆಂದು ಹೇಳಲಾಗಿದೆ. ಸುಶ್ರುತನ **ಶಾರೀರ ಖಂಡದಲ್ಲಿ ''ಚತುರ್ವಿಧಾಯಾಸ್ತು ಸಿರಾಃ ಶರೀರೇ ಪ್ರಾಯೇಣ ತಾ ಮಮಸು ಸನ್ನಿವಿಷ್ಟಾಃ । ಸ್ನಾಯುವ್ಯಸ್ಥಿಯಾಂ ಸಾನಿ ತಥೈವ ಸಂಧೀನ ಸಂತರ್ಪ್ಯದೇಹಂ ಪ್ರತಿಯಾಪಯಂತಿ॥ (೬–೧೮) ಏವ ಮೇತಾನಿ ಸಪ್ತಸಿರಾಶತಾನಿ ವ್ಯಾಖ್ಯಾತಾನಿ** (೭–೭)'' ಅಂದರೆ ಮುಖ್ಯವಾಗಿ ನಾಲ್ಕು ನಾಡಿಗಳು ಶರೀರವನ್ನು ಸಂರಕ್ಷಿಸುವುದೆಂದು ತಿಳಿಸುತ್ತಾನೆ. ಅಪರಿಮಿತವಾದ ಸೂಕ್ಷ್ಮ ನಾಡಿಗಳಿಂದ ಕೂಡಿದ ೧೬ ಪ್ರಧಾನ ನಾಡಿಗಳ ಗುಂಪು (ಸಮೂಹ) **ರಕ್ತ, ಮೇಧಸು, ಮಾಂಸ** ಇತ್ಯಾದಿ ಧಾತುಗಳಿಂದ ವ್ಯಾಪಿಸಿ ಚರ್ಮದಿಂದ ಅವಿಭಕ್ತವಾಗಿರುವ ಶರೀರವು ಎಂದು ಯೋಗಿಗಳು ಅಭಿಪ್ರಾಯ ಪಡುತ್ತಾರೆ. ಎಲ್ಲಾ ಪ್ರಾಣಿಗಳ ಪ್ರಾಣಗಳು ನಾಭಿಯನ್ನು ಸೇರಿರುವುದು ಅಂದರೆ ಪ್ರಾಣಗಳಿಗೆ ಆಶ್ರಯವಾಗಿ ಚಕ್ರದ ಅರೆಕಾಲುಗಳು ಗುಂಫವನ್ನು ಹೇಗೆ ಆಶ್ರಯಿಸಿರುವುದೋ ಅಂತೆಯೇ ನಾಭಿಯಲ್ಲಿ ಸೇರಿ ಆಶ್ರಯಿಸಿರುತ್ತದೆ. **''ನಾಭಿಸ್ಥಾಃ ಪ್ರಾಣಿನಾಂ ಪ್ರಾಣಃ ಪ್ರಾಣಾನ್ನಾಭಿ ವ್ಯುಪಾಶ್ರಿತಾಃ। ಸಿರಾಭಿರಾವೃತಾನಾಭಿಶ್ಚಕ್ರ ನಾಭಿಸಿವಾರಕೈಃ ॥''** (ಸುಶ್ರುತ ೭–೫)

ಇಷ್ಟೆಲ್ಲಾ ವಿವರ ಏಕೆ ಅಂದರೆ : ಪ್ರಾಣಾಯಾಮದ ಬಗ್ಗೆ ತಿಳುವಳಿಕೆ ಇರಬೇಕಾದರೆ ಪ್ರಾಣಾಯಾಮ ಶರೀರದ ಒಂದು ವ್ಯಾಪಾರ. ಆ ವ್ಯಾಪಾರವು ಹೇಗೆ ಅಂತ ತಿಳಿಯಲು ಶರೀರ ಶರೀರಗತ ನಾಡಿಗಳು ಮೂರ್ಧನಿ ಆದಿಯಾಗಿ ಗೊತ್ತಿರಬೇಕು. ಭಗವಂತನು ಸೃಷ್ಟಿಸಿದ ಈ ದೇಹಗಳಲ್ಲಿ ಎಷ್ಟೊಂದು ಸೂಕ್ಷ್ಮಾತಿಸೂಕ್ಷ್ಮ ಭಾಗಗಳನ್ನು ಅಳವಡಿಸಿ ತನ್ಮೂಲಕ ಈ ಶರೀರ ನನ್ನದು ಅನ್ನುವ ಅಭಿಮಾನ ಹುಟ್ಟಿಸಿ ಮೋಹಗೊಳಿಸುತ್ತಾನೆ. ವಿಚಿತ್ರವಲ್ಲವೇ ? ಇದರಿಂದಾಗಿ ಪ್ರಾಣಾಯಾಮ ಮಾಡುವಾಗ ಇಂತಹ ದೇಹಾಭಿಮಾನವನ್ನು ಸ್ವಲ್ಪ ಸಮಯದಲ್ಲಾದರೂ ಅಭ್ಯಸಿಸಿ ಭಗವಂತನಲ್ಲಿ ಮನಸ್ಸನ್ನು ನಿಲ್ಲಿಸಲು ಪ್ರಯತ್ನ ಮಾಡಬೇಕೆಂಬುದೇ ಅಭಿಪ್ರಾಯ.

**ಮೊದಲಿಗೆ ಹೋಮ, ಹವನ, ಯಾಗ ಮತ್ತು ಯಜ್ಞ ಪದಗಳ ಅರ್ಥವನ್ನು ತಿಳಿಯೋಣ.** ಈ ನಾಲ್ಕೂ ಪದಗಳು ಪರ್ಯಾಯವಾಗಿರುವುದು. ಆದರೂ ನಿಘಂಟುವಿನಲ್ಲಿ ತಿಳಿಸಿದಂತೆ ಸೂಕ್ಷ್ಮವಾಗಿ ವ್ಯತ್ಯಾಸ ಕಂಡುಬರುವುದು.

**1) ಯಜ್ಞ** : ಉದಾಹರಣೆಗೆ ಅಶ್ವಮೇಧ ಯಾಗ, ಪುತ್ರಕಾಮೇಷ್ಠಿ ಯಾಗ, ಜನಮೇಜಯರಾಜ ಆಚರಿಸಿದ ಸರ್ಪಯಾಗ, ದಕ್ಷಪ್ರಜೇಶ್ವರನ ವಾಜಪೇಯ ಯಜ್ಞ ಅಂದರೇನು ? ಒಂದು ಬೃಹತ್ತಾಗಿ ಅನೇಕ ರೀತಿಯಿಂದ An act of worship, offerings in fire with a specific purpose to establish supremacy,

imperialism over other kingdoms or regions is generally performed by ಅಶ್ವಮೇಧ ಅಥವಾ ರಾಜಸೂಯ Sri Rama and Dharmaraja undertook such yajna.

**ಯಜನತ್ವಾತ್ ಯಜ್ಞಃ ಯಜನಂ = ಆರಾಧಿಸು ಭಜಿಸು**
**ಯಜ್ಞನಾಮಕ ಶ್ರೀಮನ್ನಾರಾಯಣ ಅವನೇ ಯಜ್ಞ ಭೋಕ್ತ**
**ಯಜ್ಞೇನ ಯಜ್ಞಮಜಯಂತ ದೇವಾಃ (ಯಜ್ಞ ನಾಮಕಾದಿಯನ್ನು ಯಜ್ಞಾದಿಗಳಿಂದ ಪೂಜಿಸುತ್ತಾರೆ.)**

**2) ಹೋಮ** : ಹೋಮ ಹೋಮಿಸು, offerings oblations to Gods by offering sacred ghee/milk in the consecreted fire. ಉದಾಹರಣೆಗೆ ಪವಮಾನ ಹೋಮ, ಧಾತ್ರಿ ಹೋಮ ಮುಂತಾದವು.

**3) ಹವನ** : ಇದೂ ಸಹ ಹೋಮ. ವಾಸ್ತು ಹೋಮ ಇತ್ಯಾದಿ ದೇವತೆಗಳನ್ನು ಕರೆಯುವುದು.

ಹೀಗೆ ಮೂಲ ಅರ್ಥ ವಿಧಿವತ್ತಾಗಿ ಕುಂಡವನ್ನು ರಚಿಸಿ ಆಗಮಾದಿಗಳಲ್ಲಿ ವಿವರಿಸಿದಂತೆ ಆಚರಿಸುವ ಒಂದು ಕರ್ಮ. ಸಾಧಾರಣವಾಗಿ ಯಜ್ಞ, ಹೋಮ, ಹವನ ಇವು ಪರ್ಯಾಯ ಪದಗಳಾಗಿರುತ್ತದೆ. ಆಚಾರ್ಯ ಶ್ರೀ ಮಧ್ವರು ಹವನ ಪದ್ಧತಿ ಎಂದೇ ಹೇಳಿರುವುದರಿಂದ ಅವುಗಳನ್ನು ಪರ್ಯಾಯಾರ್ಥದಲ್ಲಿ ತಿಳಿಯಬೇಕು.

**ಹೋಮ ವಿಧಿಯ ವಿವರಣೆ**

ಹೋಮ ಏಕೆ ಯಾವಾಗ ಮಾಡಬೇಕು ಎಂಬುದನ್ನು ಶ್ರೀಮದಾಚಾರ್ಯರು ತಿಳಿಸುತ್ತಾರೆ.

**ಉಪಸರ್ಗೇಷು ಜಾತೇಷು ದೈವಭೂತಾತ್ಮ ಕೇತುಷು ।**
**ಆಯುಷೇರ್ವಾಽಥ ಶಾಂತ್ಯೈ (ಸುಖಾರ್ಥಂ) ವಾಶ್ರೀಯೇ ವ ಪುಣ್ಯವೃದ್ಧಿಯೇ।**
**ಯೋಗ್ಯತಾಯೈ ಮಂತ್ರ ಸಿದ್ಧ್ಯೈವಿಷ್ಣೋಃ ಪ್ರೀತ್ಯರ್ಥಮೇವವಾ ಧ್ಯಾತ್ವಾದೇವಂ ಜನಾರ್ದನಮ್।**

**ವಿವರಣೆ :** ಆಧಿದೈವಿಕ, ಆಧಿಭೌತಿಕ, ಆಧ್ಯಾತ್ಮಿಕ ಉತ್ಪಾತಗಳ ನಿವಾರಣೆಗಾಗಿ ಶಾಂತಿ ಆಯುವೃದ್ಧಿ, ಐಶ್ವರ್ಯ ಪ್ರಾಪ್ತಿ ಪುಣ್ಯ ವೃದ್ಧಿ ಇತ್ಯಾದಿಗಳಿಗಾಗಿ ಮಂತ್ರಸಿದ್ಧಿ ಹೊಂದಲು ಶ್ರೀ ವಿಷ್ಣುಪ್ರೀತಿ ಸಂಪಾದನೆಗಾಗಿಯೂ – ಸಂಸ್ಕಾರ ಮಾಡಲ್ಪಟ್ಟ ಅಗ್ನಿಯಲ್ಲಿ ಭಗವಂತನನ್ನು ಧ್ಯಾನಪೂರ್ವಕ ಹೋಮಿಸಬೇಕು.



**ಹೋಮವಿಧಿ**

**ವಿವರಣೆ :** ಪ್ರಥಮತಃ **ಕಲಶಸ್ಥಾಪನೆ ವಿಧಿ.**

**ಕಲಶ ಸ್ಥಾಪನೆ**

ಹೋಮಕುಂಡವನ್ನು ನಿರ್ಮಿಸಿದ ಮೇಲೆ ಹೋಮಕುಂಡದ ಪೂರ್ವಭಾಗದಲ್ಲಿ ಕಲಶ ಮಂಡಲ ಬರೆಯಬೇಕು.

ಶ್ರೀಮದಾಚಾರ್ಯರು ಕೆಳಗಿನ ರೀತಿ ವಿವರಿಸುತ್ತಾರೆ.

**ಚಕ್ರಾಬ್ಜಂ ಭದ್ರಕಂ ವಾಪಿ ಮಂಟಪೇ ಮಂಡಲಂ ಶುಭಮ್ ।**
**ಪದ್ಮಂ ವೃತ್ತತ್ರಯಂ ಚಕ್ರಂ ರಾಶಯೋ ವೀಥಿಕಾಲಥಾಃ ॥**
**ಶೋಭೋಪಶೋಭಿಕಾಶ್ಚಾಪಿ ಚಕ್ರಾಬ್ಜಸ್ಯ ತು ಲಕ್ಷಣಂ ।**
**ಚತುರಸ್ರಂ ವಿನಾಚಕ್ರಂ ವಿಶೇಷೋ ಭದ್ರಕೇ ಸ್ಮೃತಃ ॥**

**ವಿವರಣೆ :** ಯಗ್ನ ಮಂಟಪದಲ್ಲಿ ಚಕ್ರಾಬ್ಜ ಮಂಡಲ ಅಥವಾ ಭದ್ರಕಾ ಮಂಡಲವನ್ನು ಸುಂದರವಾಗಿ ಆಕರ್ಷಣೀಯವಾಗಿ ರಚಿಸಿರಬೇಕು.

ಚಕ್ರಾಬ್ಜ ಮಂಡಲದ ವಿವರಣೆ ಪಾದ್ಮ ಸಂಹಿತೆಯಲ್ಲಿ ಹಾಗೂ ವಿಜಯದಾಸರ ಸುಳಾದಿಯಲ್ಲಿ ವಿಸ್ತಾರವಾಗಿ ತಿಳಿಸಲಾಗಿದೆ. ಈ ಮಂಡಲವು ಉಪಾಸನಾ ಕ್ರಮಕ್ಕೆ ಅನುಕೂಲವಾದ್ದರಿಂದ ಶ್ರೀಮದಾಚಾರ್ಯರ ತಂತ್ರಸಾರದಲ್ಲಿ ತಿಳಿಸದಂತೆ ಅನುಸರಿಸಬೇಕಷ್ಟೇ.

ಭದ್ರಕಾ ಮಂಡಲ ಒಂದು ಚಿತ್ರ ಹೀಗಿರುತ್ತೆ.


**ಕಲಶಸ್ಥಾಪನೆಯ ಭದ್ರಕ ಮಂಡಲ**

(ಮಧ್ಯಕಮಲದ ಸುತ್ತಲೂ ಗಂಧೋದಕದ ಎಂಟು ಕಲಶ, ಶುದ್ಧೋದಕದ ಬ್ರಾಹ್ಮ ಕಲಶ ಮಧ್ಯದಲ್ಲಿ ಮತ್ತೊಂದು ಸಾರ್ವಕಲಶ, ಹೀಗೆ ಹತ್ತು ಕಲಶಗಳು, ಸುತ್ತಲಿನ ಒಂದೊಂದು ಪದ್ಮದಲ್ಲಿ ಐದರಂತೆ ಒಟ್ಟು ೪೦ ಕಲಶಗಳು)

ಮಂಡಲದೊಳಗಿದೆ ಅಷ್ಟದಳ ಪದ್ಮ. ಅದರ ಹೊರಗೆ ಮೂರು ವೃತ್ತಗಳು. ದ್ವಾದಶ ರಾಶಿಗಳು .... ವೀಥಿ, ಶೋಭೋಪಶೋಭೆಗಳು. ಕ್ರಮವಾಗಿ ಇರಬೇಕು.

ಮಂಡಲದಲ್ಲಿ ಬಣ್ಣಗಳಿಂದ ತುಂಬಿಸಿರಬೇಕು. ಕಲಶಗಳ ಸಂಖ್ಯೆ ಬಗ್ಗೆ ೧,೦೦೦, ೫೦೦, ೨೫೦ ಕಲಶಗಳನ್ನು ಇಡಬೇಕು. ಕನಿಷ್ಠ ೨೫ ಕಲಶಗಳನ್ನಾದರೂ ಇಟ್ಟಿರಬೇಕು.

**ಸಹಸ್ರಮರ್ಧಂ ಪಾದಂ ವಾ ಕಲಶಾಂಸ್ತತ್ರ ಪೂಜಯೇತ್ ।**
**ಶತಂ ತದರ್ಧಂ ಪಾದಂ ವಾ ವಿತ್ತಾ ಭಾವೇ ನಿಗದ್ಯತೇ** (ತಂ.ಸಾ. ೩–೯೮)




(ಶೋಭೋಪಶೋಭೆಗಳು)

ಇನ್ನೂ ಕಲಶಗಳಲ್ಲಿ ಹಾಕಬೇಕಾದ ದ್ರವ್ಯಗಳನ್ನು ಶ್ಲೋಕ ೯ರಲ್ಲಿ ತಿಳಿಸಿರುತ್ತಾರೆ. ಶುದ್ಧ ಜಲಗಳಿಂದ ಬೇರೆ ಬೇರೆ ಕಲಶಗಳಲ್ಲಿ ತುಂಬಬೇಕು. ಕಲಶಗಳಲ್ಲಿ ಹಾಕಬೇಕಾದ ಪದಾರ್ಥಗಳು ಹೀಗಿರುತ್ತೆ.


**ಕ್ವಾಥೇನ  ಕ್ಷೀರಿವೃಕ್ಷಾಣಾಂ ತಥಾ ಪಂಚಾಮೃತೈರಪಿ ।**
**ಪಂಚಗವ್ಯೇನ ಶುದ್ಧೇನ ಜಲೇನ ಚ ಪೃಥಕ್ಪೃಥಕ್ ॥**
**ಪೂರಯೇತ್ಕಲಶಾನ್ಮಧ್ಯಂ ಶುದ್ಧೋದೇನೈವ ಪೂರಯೇತ್**

ಕ್ಷೀರ ವೃಕ್ಷಗಳು : ಆಲ, ನೇರಳೆ, ಅಶ್ವತ್ಥ, ಅತ್ತಿ ಇತ್ಯಾದಿ ಮರಗಳು.

ಮುಂದೆ ಕಲಶಗಳ ವಿವಿಧ ಸ್ಥಾನಗಳನ್ನು ತದಭಿಮಾನಿ ದೇವತೆಗಳು ಸನ್ನಿಹಿತರಾಗಿರುತ್ತಾರೆಂದು ತಿಳಿಯಬೇಕು.



## ೨೫ ಕಲಶಗಳನ್ನು ಇಡುವ ಕ್ರಮ




ಮೇಲೆ ತೋರಿಸಿದಂತೆ ಒಟ್ಟು ಇಪ್ಪತ್ತೈದು ಕಲಶಗಳನ್ನು ಸ್ಥಾಪಿಸಬೇಕು.

ಗಂಗೋದಕ ಇತ್ಯಾದಿ ಮಂಗಳ ದ್ರವ್ಯಗಳಿಂದ ತುಂಬಬೇಕು. ಮಾವಿನ ಎಲೆಗಳಿಂದ ಅಲಂಕೃತವಾಗಿರಬೇಕು. ಇದರ ಬಗ್ಗೆ ಹೆಚ್ಚಿನ ವಿಸ್ತೃತ ವಿವರಣೆಯನ್ನು ಛಲಾರಿ ಆಚಾರ್ಯರ ವ್ಯಾಖಾನದಲ್ಲಿ ಕಾಣಬಹುದು.

ಇಷ್ಟಾದ ಮೇಲೆ ಕಲಶಾಭಿಷೇಕ ವಿಧಿಯನ್ನು ಶ್ರೀಮದಾಚಾರ್ಯರು ತಿಳಿಸಿರುತ್ತಾರೆ.

**ಕೃತ್ವಾತ್ರಿಮೇಖಲಂ ಕುಂಡಂ ಚತುರ್ವಿಂಶಾಂಗುಲೋಚ್ಛ್ರಿತಮ್**
**ತಾವತ್‌ಖಾತಂ ಚತುಷ್ಕೋಣಂ ಉಚ್ಛ್ರಿತಂ ದ್ವಾದಶೈವ ವಾ ॥**
**ದ್ವ್ಯಂಗುಲಂ ತ್ರ್ಯಂಗುಲಂ ವಾಽಪಿ ಚತುರಂಗುಲಮೇವ ವಾ ।**
**ವಿಸ್ತಾರೋ ಮೇಖಲಾನಾಂ ಸ್ಯಾತ್ ಅಂತ್ಯಾ ವಾ ಚತುರಂಗುಲಾ ।**
**ಚತುರ್ವಿಂಶಾಂಗುಲಾ ವಾ ತದ್ವಿಸ್ತಾರೋ ದ್ವಾದಶೈವ ವಾ ॥**

**ಅರ್ಥ ವಿವರಣೆ :** ಹೋಮಕುಂಡಕ್ಕೆ ಮೂರು ಮೆಟ್ಟಲುಗಳಿರಬೇಕು. ಹೋಮಕುಂಡವು ಭೂಮಿಗಿಂತ 12 ಅಥವಾ 24 ಅಂಗುಲ ಎತ್ತರವಾಗಿರಬೇಕು. ಅಂತರ 4 ಅಂಗುಲವಿರಬೇಕು. ಎತ್ತರಕ್ಕೆ ತಕ್ಕಂತೆ ಅಗಲವೂ ಅಷ್ಟೆ ಪ್ರಮಾಣವಿರಬೇಕು. Homakunda should have 3 steps. For each step there should be 4 inches ground step. (1) To second step 4 inches and from this to the third 4 inches.

Breadth of all steps should be of equal width. In short, (1) 4 x 4 (2) 4 x 4 (3) 4 x 4. Height in total 14 inches. Width also should be the same.

ಇದು ಕನಿಷ್ಟ ಪರಿಮಾಣವಾಗಿರಬೇಕು. ಅಳತೆಯಿಲ್ಲದೆ ಹೋಮಕುಂಡದಲ್ಲಿ ಮಾಡಿದ ಫಲ ಕೊಡುವುದಿಲ್ಲ. (ಚಿತ್ರದಲ್ಲಿ ವಿವರಣೆ ಕಾಣಬಹುದು.)

ವಿಪರ್ಯಾಸವೆಂದರೆ, ಇತ್ತೀಚೆಗೆ ಯಜ್ಞ ಹೋಮಗಳನ್ನು ಕಬ್ಬಿಣದಿಂದ ಕುಂಡ ಆಕಾರವಿರುವುದರಲ್ಲಿ ಮಾಡುತ್ತಾರೆ. ಯಾವ ದೇವತೆಯೂ ಪ್ರೀತರಾಗರು. ಆದ್ದರಿಂದ **''ಕುಂಡಂ ಶ್ರೇಷ್ಠಂ ತ್ರಿವೋಖಲಂ''** ಎಂಬುದನ್ನು ಶ್ರೀಮದಾಚಾರ್ಯರು ನಿರೂಪಿಸಿರುತ್ತಾರೆ.

ಇನ್ನು ಮುಖ್ಯ ವಿಷಯ – ಹೋಮಕುಂಡದ ಮೇಲಿನ ಮೆಟ್ಟಲು ಅಧೋಭಾಗ ಹೋಮ ಪದಾರ್ಥಗಳನ್ನು ಪ್ರತಿಷ್ಠಿತ ಅಗ್ನಿಯಲ್ಲಿ ಮಂತ್ರಪೂರ್ವಕ ಹಾಕಲು ಅಶ್ವತ್ಥ ಎಲೆ ಆಕಾರ ಯೋನಿಯನ್ನು ಮಾಡಿ ತನ್ಮೂಲಕ ಹಾಕಬೇಕು. ಈ ಯೋನಿ 12 ಅಂಗುಲ ಉದ್ದವಿರಬೇಕು.

**ಅಶ್ವತ್ಥಪತ್ರಾಕೃತಿಃ ಸ್ಯಾನ್ಮೂಲತೋ ದ್ವಾದಶಾಂಗುಲಾ ।**
**ಯೋನಿಃಖಾತೇ ಚ ವಿನತಾ ಪ್ರವಿಷ್ಟಾ ದ್ವ್ಯಂಗುಲಂ ತಥಾ ॥**
**(ತಂ.ಸಾ. ೨–೧೮)**

ಒಂದು ಮುಖ್ಯ ವಿಷಯ – ಹೋಮಕುಂಡವು ಮಣ್ಣಿನ ಇಟ್ಟಿಗೆಯಿಂದಲೂ, ತುಪ್ಪ ಆಜ್ಯ ಪದಾರ್ಥಗಳನ್ನು ಅಗ್ನಿಯಲ್ಲಿ ಹಾಕಲು ಯೋನಿ ಮಣ್ಣಿನಿಂದ ರಚಿತವಾಗಿರಬೇಕು. ಕುಂಡದಲ್ಲಿ ಲಕ್ಷ್ಮೀಸಹಿತನಾಗಿ ಶ್ರೀಹರಿಯನ್ನು ಧ್ಯಾನಿಸಿ **''ವಿಷ್ಣುವೀರ್ಯಾತ್ಮಕಂ ವಹ್ನಿಂ ನಿಕ್ಷಿಪೇತ್ ಪ್ರಣವೇನ ಹ''**

ಓಂ ನಮೋ ಲಕ್ಷ್ಮೀಸಹಿತ ಶ್ರೀನಾರಾಯಣಂ ಧ್ಯಾತ್ವಾ


ವಿಷ್ಣುವೀರ್ಯಾತ್ಮಕ ವಹ್ನಿಯನ್ನು ಓಂ ಎಂಬ ಮಂತ್ರದಿಂದ ಪ್ರತಿಷ್ಠಾಪನೆ ಮಾಡಬೇಕು. ವ್ಯಾಹೃತಿ ಮಂತ್ರಪೂರ್ವಕವಾಗಿ ಷೋಡಶ ಸಂಸ್ಕಾರ ಮಾಡಬೇಕು.

**ವಿಶೇಷಾಂಶ :** ಹೋಮಕುಂಡದಲ್ಲಿ ಶ್ರೀಹರಿ ರಮೆಯೊಂದಿಗೆ ರಮಿಸುತ್ತಾನೆಂದು ಅವರಲ್ಲಿ ಉತ್ಪನ್ನವಾದ ವೀರ್ಯವೇ ಅಗ್ನಿಯೊಂದು ಅನುಸಂಧಾನ ಮಾಡಿ ಅಗ್ನಿಯನ್ನೂ ಪ್ರತಿಷ್ಠಾಪನೆ ಮಾಡಬೇಕು.

**''ಯೋನೌನ್ಯಸ್ಯ ಹರೇರ್ವೀರರ್ಯಂ ಇತಿ ಸ್ಮೃತ್ವಾ ಸಮರ್ಚಯೇತ್।**
**ಕುಂಡೆ ನ್ಯಸೇತ್ ಹರಿರ್ಗರ್ಭಾಂ ಆಧತ್ತೇತಿ ವಿಚಿಂತಯೇತ್॥''**
**(ಯೋಗದೀಪಿಕಾ)**



ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತ **'ತಂತ್ರಸಾರ ಸಂಗ್ರಹ'** ರೀತ್ಯ ಹೋಮ ಕುಂಡ ಪರಿಮಾಣ (೨ನೇ ಅಧ್ಯಾಯ)




**ಮೆಟ್ಟಲು ಮಣ್ಣಿನ ಇಟ್ಟಿಗೆಯಿಂದ ನಿರ್ಮಿತವಾಗಿರಬೇಕು**

ಈ ಹೋಮಕುಂಡವು ಶುಭಕಾರ್ಯಗಳಾದ ಪವಮಾನ, ಧಾತ್ರಿ, ಉಪಾಕರ್ಮ, ಉಪನಯನ, ವಿವಾಹ ಇತ್ಯಾದಿಗಳಿಗೆ ಸಾಮಾನ್ಯವಾಗಿ ನಿರ್ಮಿತವಾಗಿರಬೇಕು.

**ಹೋಮ ಮಾಡಲು ಉತ್ತಮ ಪದಾರ್ಥಗಳು :**

ಅಗ್ನ್ಯಂತರ್ಗತ ಶ್ರೀಹರಿಯು ಪ್ರೀತನಾಗಲಿ ಎಂದು ಶಾಸ್ತ್ರದಲ್ಲಿ ತಿಳಿಸಿದಂತೆ ತುಪ್ಪ, ಪಾಯಸ, ಸಮ್ಮಿತ್ತು, ಎಳ್ಳು, ಅಕ್ಕಿ, ಮಧುಪಾಲಕ, ಅಮೃತಬಳ್ಳಿಗಳಿಂದ ಹೋಮಿಸಬೇಕು. ಹಾಲೂ ಸಹ ಬರುವುದು.

ಈ ದ್ರವ್ಯಗಳನ್ನು ಆಹುತಿ ಮಾಡಲು ಎಷ್ಟು ಎಷ್ಟು ಹಾಕಬೇಕೆಂದು ತಿಳಿದುಹಾಕಬೇಕು.

ಪೂರ್ಣಾಹುತಿಗೆ ಪೂರ್ವದಲ್ಲೇ ಪೂಜಿಸಿ ಗುರು ಗಣೇಶರನ್ನು ಪೂಜಿಸಿ ಪುಣ್ಯಾಹ ವಾಚನ ಆಗಿರಬೇಕು. ಹೋಮಾಂತ್ಯದಲ್ಲಿ ಆಚಾರ್ಯರಿಗೆ ಯಥಾಶಕ್ತಿ ಗುರುದಕ್ಷಿಣೆ ಕೊಡಬೇಕು.

## ಇನ್ನು ಪ್ರತಿಮಾ ಲಕ್ಷಣ

ಪ್ರತಿಮೆಗಳನ್ನು ನಿರ್ಮಿಸಲು ಬಂಗಾರ (ಬೆಳ್ಳಿ), ತಾಮ್ರ, ಪಂಚಲೋಹ, ಕಲ್ಲು ಮರ(ದಾರು) ಅಥವಾ ಮಣ್ಣು (ಮೃತ್)ಗಳಾಗಿದ್ದರೆ ಪ್ರತಿಷ್ಠ ಮಾಡಿ ಪೂಜಿಸಲು ಉತ್ತಮ.

**ಪ್ರತಿಷ್ಠಾಂ ಕಾರಯನ್ ವಿಷ್ಣೋಃ ಕುರ್ಯಾತ್ ಸುಪ್ರತಿಮಾಂ ಬುಧಃ ।**
**ಲೋಹೈರ್ವಾ ಶಿಲಯಾ ದಾರ್ವಾ ಮೃದಾ ವಾಪಿ ಯಥಾಕ್ರಮಂ ॥**

**(ತಂ. ಸಂ. 3-1)**

ಪರಮಾತ್ಮನ ಪೂಜೆಯನ್ನು ಮಾಡಲೇಬೇಕು. "ಪೂಜ್ಯಶ್ಚ ಭಗವಾನ್ ನಿತ್ಯಂ" ಎಂಬುದಾಗಿ ಶ್ರೀಮದಾಚಾರ್ಯರು ತಿಳಿಸಿರುತ್ತಾರೆ. ಪೂಜೆ ಎರಡು ವಿಧ. (1) ವೇದಮಂತ್ರಗಳನ್ನು ಹೇಳುತ್ತಾ ಪ್ರಾಣಾಯಾಮ ರೇಚಕ ಪೂರಕ ಕುಂಭಕಗಳಿಂದ ಉಸುರನ್ನು ಭ್ರೂಮಧ್ಯದಲ್ಲಿ ನಿಲ್ಲಿಸಿ ಶ್ರೀರಮಾರಮಣನನ್ನು ಅನೇಕ ರೂಪಗಳಿಂದ ವರ್ಣಿಸುತ್ತಾ ಧ್ಯಾನ ರೂಪ ಪೂಜಾ ಇದು ಪ್ರಬುದ್ಧರು ಮಾಡತಕ್ಕ ಪೂಜಾ. ಬ್ರಹ್ಮಾದಿ ದೇವತೆಗಳು ಋಷಿಮುನಿಗಳು ಅಧಿಕಾರಿಗಳು.
(2) ಇನ್ನು ಅಪ್ರಬುದ್ಧರು (ಅಲ್ಪಬುದ್ಧಿವುಳ್ಳವರಾದ) ಮನುಷ್ಯೋತ್ತಮರು, ಮನುಷ್ಯರು ಪ್ರತಿಮೆಗಳಲ್ಲಿ ಈ ಲಕ್ಷ್ಮೀ ಸಹಿತ ನಾರಾಯಣನನ್ನು ಅನುಸಂಧಾನ ಪೂರ್ವಕ ಷೋಡಶೋಪಚಾರ ಪೂಜೆ ಮಾಡಬೇಕು. **"ಪ್ರತಿಮಾಸು ಅಪ್ರಬುದ್ಧಾನಾಂ"** ಪ್ರತಿಮಾಗಳು ಎರಡು ವಿಧ (೧) **ಅಚಲ** ಪ್ರತಿಮಾ (೨) **ಚಲ** ಪ್ರತಿಮಾ ಎಂದು.


ದೇವತಾ ಪ್ರತಿಮೆಗಳು ದೇವಾಲಯಗಳಲ್ಲಿ ಪ್ರತಿಷ್ಠಿತವಾದದ್ದನ್ನು ಅಚಲ ಪ್ರತಿಮಾ ಎಂದು. ಪ್ರತಿಷ್ಠಿತ ಪ್ರತಿಮಾಗಳಲ್ಲಿ ಭಗವಂತನ ಸಾನ್ನಿಧ್ಯ ವಿಶೇಷವಾಗಿರುವುದು. **"ಅಪ್ರತಿಷ್ಠಿತ ಬಿಂಬಸ್ಯ ಪೂಜನಂ ಸಿದ್ಧಿಹಾನಿ ಕೃತ್" ಪ್ರತಿಷ್ಠೆ ಮಾಡದೇ ಇರುವ ಮೂರ್ತಿ ಪೂಜೆ ಮಾಡಬಾರದು.** ಮಾಡಿದರೆ ಸಿದ್ಧಿಯಾಗುವುದಿಲ್ಲ. **ಅಲ್ಲದೇ ಆ ಮೂರ್ತಿಗಳಲ್ಲಿ ರಾಕ್ಷಸರು ವಾಸಿಸುತ್ತಾರೆ. ಅನಿಷ್ಠಕಾರಕ.** ಆದ್ದರಿಂದ ಶ್ರೀಮದಾಚಾರ್ಯರು ಈ ಅಧ್ಯಾಯದಲ್ಲಿ ಪ್ರತಿಮಾ ಲಕ್ಷಣ, ದೇವಾಲಯ ನಿರ್ಮಾಣ, ಪ್ರತಿಷ್ಠಾ ವಿಧಿ ವಿಧಾನಗಳನ್ನು ವಿಶದವಾಗಿ ನಿರೂಪಿಸುತ್ತಾರೆ.

**ಚಲ ಪ್ರತಿಮೆಗಳೆಂದರೆ ಮನೆಗಳಲ್ಲಿ ಪರಂಪರಾಗತ ಹಿಂದಿನವರಿಂದ ಪೂಜಿತ ಪ್ರತಿಮೆಗಳು** ಹಾಗೂ ಮಠಗಳಲ್ಲಿ ಯತಿಗಳಿಂದ ಪೂಜಿಸಲ್ಪಡುವ ಪ್ರತಿಮೆಗಳು. ವಿಶೇಷ ಹಬ್ಬಗಳಲ್ಲಿ ಗೌರಿ ಗಣೇಶ, ಕೃಷ್ಣಾಷ್ಟಮಿ ದಿನ ಕೃಷ್ಣನ ಮೂರ್ತಿ ಇವನ್ನು ಪೂಜಾ ನಂತರ ಜಲಾಶಯಗಳಲ್ಲಿ ವಿಸರ್ಜಿಸಬೇಕು.

**ಪ್ರತಿಮಾ ಲಕ್ಷಣ :** ಭಗವಂತನ ರಮಾದೇವಿಯ ವಾಯುದೇವರ (ಹನುಮ ಮಧ್ವರ) ಪರಿವಾರದವರ ಪ್ರತಿಮೆಗಳ ವಿವರಣೆ ಅತಿ ಸೊಗಸಾಗಿ ತಿಳಿಸಲಾಗಿದೆ. ಇಲ್ಲಿ ಮಾದರಿಗಾಗಿ "ಶ್ರೀರಾಮಚಂದ್ರ" ಮೂರ್ತಿಯ ಲಕ್ಷಣ ತಿಳಿಸಲಾಗಿದೆ. ಶ್ಲೋಕ 3, 4, 5ರಿಂದ ಶ್ರೀಮದಾಚಾರ್ಯರು ಪ್ರತಿಮೆಯ ಎತ್ತರಾದಿ ಅಂಗುಲಗಳಲ್ಲಿ ತೋರಿಸಿದ್ದಾರೆ. ಇದರೊಂದಿಗೆ ಲಗತ್ತಿಸಿರುವ ಪ್ರತಿಮಾ ಬಗ್ಗೆ ಹೀಗಿದೆ.



## ಶ್ರೀರಾಮನ ಪ್ರತಿಮೆ



| | | |
|---|---|---|
| 1. | ಮುಕುಟ (ಕಿರೀಟ) | 8 ಅಂಗುಲ |
| 2. | ಹಣೆಯ ಮೇಲಿಂದ ನೆತ್ತಿಯವರೆಗೂ | 3 ಅಂಗುಲ |
| 3. | ಹಸನ್ಮುಖದ ಉದ್ದ | 9 ಅಂಗುಲ |
| 4. | ಕುತ್ತಿಗೆ | 3 ಅಂಗುಲ |
| 5. | ಕುತ್ತಿಗೆಯಿಂದ ಸ್ಥನದವರೆಗೆ | 6 ಅಂಗುಲ |
| 6. | ಸ್ಥನದಿಂದ ನಾಭಿಯವರೆಗೆ | 15 ಅಂಗುಲ |
| 7. | ನಾಭಿಯಿಂದ ವೃಷಣ ಪರ್ಯಂತ | 10.5 ಅಂಗುಲ |
| 8. | ವೃಷಣ ಮೂಲದಿಂದ | 2 ಅಂಗುಲ |
| 9. | ಗುದ ಪರ್ಯಂತ | 2 ಅಂಗುಲ |
| 10. | ಗುದದಿಂದ ಕಾಲಿನ ಗಂಟ | 17 ಅಂಗುಲ |
| 11. | ಗಂಟು | 2 ಅಂಗುಲ |
| 12. | ಗಂಟಿನಿಂದ ಪಾದ ಗಂಟಿನವರೆಗೆ | 22 ಅಂಗುಲ |
| 13. | ಅಲ್ಲಿಂದ ಪಾದ ತಲದವರೆಗೆ | 4.5 ಅಂಗುಲ |

ಹೀಗೆ ಮುಕುಟವನ್ನು ಬಿಟ್ಟು 96 ಅಂಗುಲವಾಗುವುದು. (**ಅಂಗುಲ** = ನೆಲ್ಲನ್ನು ಮೂರು ಕೂಡಿಸಿದ ಪರಿಮಾಣ. **ಉತ್ತಮ ಪುರುಷನ ಅಂಗುಷ್ಠ** ಮಧ್ಯಬೆರಳು ಅಥವಾ ಹೆಬ್ಬೆರಳು ಒಂದು ಅಂಗುಲ.

**ದೀರ್ಘಾಸ್ತು ಕಲಮಾಸ್ತಿಸ್ರಸ್ತಿರ್ಯಗಷ್ಟಯವೋದರಾಃ**
**ಅಂಗುಲ್ಯಾ ಮಧ್ಯರೇಖಾಯಾಃ ಸಮಾ ಲಕ್ಷಣತಃ ಸ್ಮೃತಾಃ**

ಶ್ರೀಮದಾಚಾರ್ಯರು ನಿರೂಪಿಸಿದ ವಿವರ ನಾರದ ಸಂಹಿತೆ ಥಲಾರಿ ಟಿಪ್ಪಣಿಗಳಲ್ಲಿ ಪಾಠಾಂತರ ಭೇದವಿದ್ದರೂ ಮೂಲಕ್ಕೆ ಯಾವ ವಿರೋಧವೂ ಇರುವುದಿಲ್ಲವೆಂದು ತಿಳಿಯಬೇಕು. ಶ್ರೀರಾಮನ ಪ್ರತಿಮೆ ಆಜಾನುಭಾಹು ದೀರ್ಘ ವಕ್ಷ ಸ್ಥಳದ ಪ್ರಕಾರ ಅಳತೆ ಸಾಧಾರಣವಾಗಿ ಹಿಂದೆ ತೋರಿಸಲಾಗಿದೆ.

ಶ್ರೀಮದಾಚಾರ್ಯರು ಪ್ರತಿಮೆಗಳ ಅವಯವಗಳ ಅಳತೆಯನ್ನು ತೋರಿಸಿರುತ್ತಾರೆ. ಪಾದ, ಹೆಬ್ಬೆರಳು, ಹೆಬ್ಬೆಟ್ಟು, ಉಗುರು, ಎರಡು ಬೆರಳುಗಳ ಉದ್ದ ಸಮಾನ ಹೀಗೆ ಐದು ಬೆರಳುಗಳ ವಿವರಣೆ ಇದೆ. ಕಾಲಿನ ಪ್ರಮಾಣ ಮೊಣಕಾಲು ವೃಷಣದಿಂದ ಲಿಂಗದವರೆಗು ಲಿಂಗದ ಪ್ರಮಾಣ ಎದೆಯ ಪ್ರಮಾಣ ಭುಜ ಅಂಗೈ ಕೈಬೆರಳುಗಳು, ಎದೆಯ ಸುತ್ತಳತೆ, ಕುತ್ತಿಗೆ, ಸ್ಥನದ ಆಕಾರ, ರೇಖೆಗಳು, ಹೊಟ್ಟೆ, ಹಣೆ, ಕುತ್ತಿಗೆಗಳಲ್ಲಿ ಮೂರು ರೇಖೆಗಳಿರಬೇಕು. ಕೈಬೆರಳು (ನಖ), ಕಿವಿ ಲಕ್ಷಣ ಕಿವಿ ಲತೆಯಂತೆ ವಿನತವಾಗಿರಬೇಕು. ಒಟ್ಟು ಕಿವಿ 2.5 ಅಂಗುಲ. ಕೂದಲು ಕಪ್ಪಾಗಿ ಕೇಶರಾಶಿಯಿಂದ ಶೋಭಿಸುತ್ತಿರಬೇಕು. ಮುಖ ಕಮಲ – ವಿಶಾಲವಾದ ಲಲಾಟ (ಹಣೆ) ತಲೆ ವಿಸ್ತಾರ



9.5 ಅಂಗುಲವಿರಬೇಕು. ಕೂದಲು ಗುಂಗುರವಾಗಿ ಅದಕ್ಕೆ ತಕ್ಕಂತೆ ಕಿರೀಟ ಶೋಭಾಯಮಾನವಾಗಿ ನವರತ್ನ ಖಚಿತ ಸ್ವರ್ಣಮಯವಾಗಿರಬೇಕು. ಇನ್ನೂ ಆಭರಣಗಳು ಎಷ್ಟು, ಹೇಗಿರಬೇಕು ಎಂಬುದನ್ನೂ ತಿಳಿಸಲಾಗಿದೆ.

ಇಷ್ಟಾದ ಮೇಲೆ ಪ್ರತಿಮೆಗೆ ಶಿಲಾ ಆಯ್ಕೆ ಪರೀಕ್ಷೆ : ಶಿಲಾ ಗರ್ಭಸ್ಥವಾಗಿರಬಾರದು. ಸಾಲಿಗ್ರಾಮ ಶಿಲೆ ಅತಿ ಪವಿತ್ರ. ಇಲ್ಲವಾದರೆ ಅಮೃತಶಿಲಾ (Marble) ಶುದ್ಧ ಬಿಳೀ ಬಣ್ಣವಾಗಿರಬೇಕು.

ಪ್ರತಿಮಾ ಕೆತ್ತನೆ ಕ್ರಮ ಅಧಿಕಾರಿ : ದೇವಾಲಯ ನಿರ್ಮಾಣ ಸ್ಥಳ ಪರೀಕ್ಷೆ – ಪೂರ್ವ ಉತ್ತಮ, ಉತ್ತರ ಮಧ್ಯಮ ದಿಕ್ಕು. ಆದರೆ, ದಕ್ಷಿಣಕ್ಕೆ ಕದಾಚಿತ್ ದಿಕ್ಕಾಗಿರಬಾರದು.

ಗರ್ಭಗುಡಿ ವಿವರ **ಪೀಠ** : ದೇವಾಲಯ ಭಾಗಗಳು ಇವುಗಳನ್ನು **ಮಾನಸಾರ ಶಿಲ್ಪ ಶಾಸ್ತ್ರ ಸಮರಾಂಗಣ ಸೂತ್ರಧಾರ**ದಲ್ಲಿ ವಿಶೇಷ ವಿವರಣೆ ಇರುವುದು.

ಪ್ರತಿಷ್ಠಾಪನೆ ಅಂಗವಾಗಿ ಹೋಮ ಅಧಿವಾಸಗಳು ಅಂಕುರಾರ್ಪಣೆ ಜ್ಞಾನಿಗಳಿಂದ ಪ್ರತಿಷ್ಠೆ, ನೇತ್ರೋನ್ಮಿಲನ ಪಂಚಾಮೃತಾಭಿಷೇಕ, ಕಲಾಕರ್ಷಣ, ಹರಿಸಾನ್ನಿಧ್ಯ, ಅಲಂಕಾರ, ಧೂಪ, ದೀಪ, ನೈವೇದ್ಯ, ಭೂರಿ ಭೋಜನ, ಬ್ರಾಹ್ಮಣರಿಗೆ ದಕ್ಷಿಣೆ, ಪ್ರಾಕಾರೋತ್ಸವ, 42ನೇ ದಿನ ಮಂಡಲ ಪೂಜಾ ಕ್ರಮ, ಉತ್ಸವಾದಿಗಳು, ಸಂಪ್ರೋಕ್ಷಣ ಕ್ರಮ ಇತ್ಯಾದಿಯಾಗಿ ವಿಸ್ತಾರವಾಗಿರುವುದು.

**ತತ್ರ ತತ್ರ ಸ್ಥಿತೋವಿಷ್ಣೋಸ್ತತ್ರಚ್ಛಕ್ತಿಃ ಪ್ರಬೋಧಯನ್ ।**
**ಏಕ ಏವ ಮಹಾಶಕ್ತಿಃ ಕುರುತೇ ಸರ್ವ ಮಂಜಸಾ ॥**

ಯಾವುದೇ ದೇವತಾ ಪ್ರತಿಷ್ಠಿತ ಪ್ರತಿಮೆಗಳಲ್ಲಿ ಶ್ರೀಹರಿಯೊಬ್ಬನೇ ಅವರಿಗೆಲ್ಲ ಶಕ್ತಿ ನೀಡುವನು. ಅವನೇ ಮಹಾಶಕ್ತಿ ಎಂದು ತಿಳಿಯಬೇಕು. **''ಸರ್ವದೇವ ನಮಸ್ಕಾರಾಃ (ಪೂಜಾಃ) ಕೇಶವಂ ಪ್ರತಿಗಚ್ಛಂತಿ''** ಎಂದು ತಿಳಿಯಬೇಕು.

ಇಷ್ಟಾದ ಮೇಲೆ ಮಹಾಮಂತ್ರಗಳನ್ನು ಉಪಾಸನಾ, ಪಾರಾಯಣಾ ಮಾಡಬೇಕೆಂದು ತಿಳಿಸುತ್ತಾರೆ.

**ದಿವಿ ಸೂರ್ಯಾದಿಗ್ರಹ ಜಾತೇಷು ಇತ್ಯಾದಿ ಉತ್ಪಾತ ನಿವೃತ್ಯರ್ಥಂವಾ ಹೋಮೋಪ್ರರ್ವಿತ (ಥಲಾರೀಯ)**

**ಒಂದು ಎಚ್ಚರಿಕೆ ಮಾತು**

ನಿರ್ಮಿತ ಸ್ಥಾಪಿತವಾದ ಪ್ರತಿಮೆಗಳು ಶಿಲಾ, ತಾಮ್ರ, ಪಂಚಲೋಹ ಇತ್ಯಾದಿಗಳೆ ಭಗವಂತನೆಂದೂ, **ವಿಗ್ರಹವೇ ದೇವನೆಂದು ತಿಳಿದು ಪೂಜೆ ಮಾಡಬಾರದು.**

ಬ್ರಹ್ಮಸೂತ್ರ, ನಾಲ್ಕನೇ ಅಧ್ಯಾಯ ಮೊದಲನೇ ಪಾದ ಮೂರನೇ ಸ್ತೋತ್ರದಲ್ಲಿ **ಓಂ ನಚ ಪ್ರತೀಕೇ ನಹಿಸಃ ಓಂ** ಎಂದಿದೆ

**ವಿವರಣೆ :** ಆಚಾರ್ಯರ ಭಾಷ್ಯ ಹೀಗಿರುತ್ತದೆ.

ನಾಮ ಬ್ರಹ್ಮತ್ಯುಪಾಸ್ತೇ (ಚಂ.3-1-5) ಇತ್ಯಾದಿ ಶಬ್ದ ಬ್ರಾಂತ್ಯಾನ ಪ್ರತೀಕೇ ಬ್ರಹ್ಮ ದೃಷ್ಟಿ ಕಾರ್ಯ, ಕಿಂತುಸ್ತ್ಥತ್ವೇನೈವೋಪಾಸನಂ ಕಾರ್ಯಂ (1) ನಾಮ ಬ್ರಹ್ಮ ಎಂದು ಪ್ರತಿ, ಬ್ರಹ್ಮ (ಹರಿ) ಎಂದು ಪ್ರತೀಕವೇ ಬ್ರಹ್ಮನು ಎಂದು ಉಪಾಸನೆ ಮಾಡಬಾರದು. ಆದರೆ ಪ್ರತೀಮಾದಿಗಳಲ್ಲಿ ಭಗವಂತನ ಸಾನ್ನಿಧ್ಯವಿರುವುದೆಂದು ಉಪಾಸನೆ ಮಾಡಬೇಕು. ಇನ್ನು ಪ್ರತಿಷ್ಠಿತವಾದ ಪ್ರತಿಮೆಗಳಲ್ಲಿ ಭಗವಂತನ ವಿಶೇಷ ಸಾನ್ನಿಧ್ಯ ಬರಬೇಕಾದರೆ, 1. ಜ್ಞಾನಿಗಳಿಂದ ಪ್ರತಿಷ್ಠಿತವಾಗಿರಬೇಕು. ತಮ್ಮ ಬಿಂಬ ರೂಪ ಭಗವಂತನನ್ನು ಧ್ಯಾನಿಸಿ, ಕಲಾಕರ್ಷಣೆ ಮಾಡಿ ಹರಿಸಾನ್ನಿಧ್ಯ ಇರುವಂತೆ (ಆಹ್ವಾನಿಸುತ್ತಾರೆ) 2. ಇಂತಹ ಪರಮಾತ್ಮನು ಪ್ರತಿಮೆಗಳಲ್ಲಿ ಸದಾ ಸಾನ್ನಿಧ್ಯವಿರಬೇಕಾದರೆ ಅರ್ಚಕರು ತಪೋಬಲಾದಿಗಳಿಂದಲೂ ಹರಿಸಾನ್ನಿಧ್ಯವಿರುವುದು. **ಪ್ರತಿಮಾಯಾಂತು ಸಾನ್ನಿಧ್ಯಂ ಅರ್ಚಕಸ್ಯ ತಪೋಬಲಾತ್** ಎಂಬ ಪ್ರಮಾಣವಿರುವುದು.

**ತಂತ್ರ ಮಾರ್ಗಸ್ತು ಹರಿಣಾ ಹ್ಯಸಂಖ್ಯಾಃಕೀರ್ತಿತಾ ಅಪಿ ।**
**ತೇಷ್ವಯಂ ಸುಗಮೋ ಮಾರ್ಗಃ ಸುಫಲಶ್ಚಾನುತಿಷ್ಠತಾಮಾ ॥** (3-137)

**ವಿವರಣೆ :** ಪಂಚರಾತ್ರಾದಿಗಳಲ್ಲಿ ಪರಮಾತ್ಮನು ಅಸಂಖ್ಯವಾಗಿ ತಂತ್ರ ಪದ್ಧತಿಗಳನ್ನು ಉಪದೇಶ ಮಾಡಿರುತ್ತಾನೆ. ಆದರೆ ಈಗ ಅವುಗಳ ಸಾರವನ್ನಷ್ಟೇ ತಿಳಿಸಿ ಆಚರಿಸಲು ಸುಗಮವಾಗಲೆಂದು ತಿಳಿದು ಇದರಿಂದ ಸಫಲವಾಗಲೆಂದು ಹೇಳಲಾಗಿದೆ.

**ಪೀಯತೇನೇನ ಮಾರ್ಗೇಣ ಪೋಜಿತೋ ಮುಕ್ತಿ ದೋಭವೇತ್ ।**
**ಕಾಮದಶ್ಚ ಸ್ವಭಕ್ತಾನಾಂ ಭಗವಾನ್ ಪುರುಷೋತ್ತಮಃ ॥**

**4. ನಾಲ್ಕನೇ ಅಧ್ಯಾಯು**ವೂ ಮೂರನೇ ಅಧ್ಯಾಯದಂತೆ ಅತಿ ಮೌಲಿಕ ಸಂಗ್ರಹವಾಗಿರುವುದು. ಇಲ್ಲಿ ಕಲಿಯುಗದಲ್ಲಿ ಮಹಾಫಲಪ್ರದಾಯಕ ಪ್ರದಾನ ಮಂತ್ರಗಳನ್ನು ಶ್ರೀಮದಾಚಾರ್ಯರು ನಿರೂಪಿಸಿರುವರು. ಎಲ್ಲಾ ಮಂತ್ರಗಳನ್ನು ಬರೆಯಲಾಗದೆ ಅತಿ ಮುಖ್ಯ ಉಪಾಸನೆಗೆ ಯೋಗ್ಯವಾದವುಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

1. ಶ್ರೀನರಸಿಂಹ ಮಹಾ ಮಂತ್ರ

**ಓಂ ಉಗ್ರಂ ವೀರಂ ಮಹಾವಿಷ್ಣುಂ ಜ್ವಲಂತಂ ಸರ್ವತೋಮುಖಮ್।**
**ನೃಸಿಂಹಂ ಭೀಷಣಂ ಭದ್ರಂ ಮೃತ್ಯು ಮೃತ್ಯಂ ನ ಮಾಮ್ಯಹಂ ॥**

(ಅಗ್ನಿ ಪುರಾಣದಲ್ಲಿಯೂ ಉಕ್ತವಾಗಿದೆ)



**ಅನುಷ್ಟುಭನೃಸಿಂಹೇನ ವಿಷವ್ಯಾಧಿ ವಿನಾಶನಮ್**
**ಓಂ ಹಮ್ ಈಮ್ ಉಗ್ರಂ ವೀರಂ ಮಹಾವಿಷ್ಣುಂ ಜ್ವಲಂತಂ ಸರ್ವತೋಮುಖಂ।**
**ನೃಸಿಂಹಂ ಭೀಷಣಂ ಭದ್ರಂ ಮೃತ್ಯುಮೃತ್ಯುಂ ನಮಾಮ್ಯಹಂ ॥**
**ಅಯಮೇವತು ಪಂಚಾಂಗೋ ಮಂತ್ರಃ ಸರ್ವಾರ್ಥಸಾಧಕಃ ।**
**ಧ್ಯಾಯೇನ್ನೃಸಿಂಹ ಮುರುವೃತ್ತ ರವಿತ್ರಿನೇತ್ರಂ**
**ಜಾನುಪ್ರಸಕ್ತ ಕರಯುಗ್ನಮಥಾ ಪರಾಭ್ಯಾಮ್**
**ಚಕ್ರಂ ಧರಂಚ ದಧತಂ ಪ್ರಿಯುಮಾಸಮೇತಂ ।**
**ತಿಗ್ನಾಂಶು ಕೋಟ್ಯಧಿಕತೇಜ ಸಮುಗ್ರ್ಯ ಶಕ್ತಿಮ್ ॥**



**(ನರಸಿಂಹ ಮಂತ್ರ)**

**ಬಾಹುಬಾಹುಂ ಮಹಾಕಾಯುಮುದ್ಯುಕ್ತಂ ಚೋದ್ಯತಾಯುಧಮ್**
**ಸ್ಮರನ್ ವಿಜಯಮಾಪ್ನೋತಿ ಸ್ತಂಭನಾದೀಂಶ್ಚ ಕಾರಯೇತ್ ।**
**ವಸುಪೂರ್ಣಕರಂ ರತ್ನಪರ್ವತಸ್ಥಂ ವಿಭಾವಯನ್ ।**
**ವಸುಸಿದ್ಧಿಮವಾಪ್ನೋತಿ ಸೇವ್ಯಮಾನಮಜಧಿಭಿಃ ।**
**ಶ್ರೀಯಾವಿಬೂತಿಬಿರ್ಯುಕ್ತಂ ಭಾವಯನ್‌ಭೂತಿ ಮಾಪ್ನುಯಾತ್ ।**

**(ಶ್ರೀ ನೃಸಿಂಹ ಪುರಾಣ)**

2. ಶ್ರೀಹಂಸ ಮಂತ್ರ

**ಅಶೇಷ ದೋಷದಹನಸ್ತತ್ವಜ್ಞಾನ ಪ್ರದಾಯಕಃ**
**ಅಷ್ಟೈಶ್ವರ್ಯ ಪ್ರದಶ್ಚೈವ ಕೃತಾ ದೌಸಮುಪಸಾತಾಮಾ ।**
**ತಾರಯೋಗೋಪ್ಯೇವಮೇವ ಬ್ರಹ್ಮಾದಾವೇವ ವರ್ತತೇ ॥**

ನ್ಯಾಸಕ್ರಮಃ
ಹಂಸಾಯ ಹೃದಯಾ ಯ ನಮಃ ಸೋಹಂ ಶಿರಸೇಸ್ವಾಹಾ ।
ಸ್ವಾಹಾ ಶಿಖಾಯೈ ವಷಟ್, ಹಂಸಃ ಕವಚಾಯ ಹುಮ್ ಸೋಽಹಂ
ನೇತ್ರಾಭ್ಯಾಂ ವೌಷಟ್, ಸ್ವಾಹಾ ಅಸ್ತ್ರಾಯ ಫವಾಗಿ
ಓಂ ಹಂಸಃ ಸೋಹಂ ಸ್ವಾಹಾ ಓಂ ॥ ಎಂದು ಧ್ಯಾನ ಉಪವಾಸ ಮಾಡಬೇಕು.

3. ಶ್ರೀರಾಮಚಂದ್ರ ಮಂತ್ರ

ಶ್ಯಾಮಂ ರವೀಂದ್ವಧಿಕ ಕಾಂತಿ ಯುಕ್ತಂ
ಜ್ಞಾನಂ ಶರಂ ದಧತಂ ಪ್ರಿಯಮಾ ಸಮೇತಮ್
ಸ್ವಾತ್ಮಸ್ವ ರೂಪಮತಂ ಹನುಮನ್ಮುಖೇಷು
ಸಂದರ್ಶಯಂತ ಮಜಿತಂ ಸ್ಮರತೋರುಗೀರ್ಭಿಃ ॥
ಓಂ ಶ್ರೀ ಸೀತಾ ಪತೇ ಶ್ರೀರಾಮ ಚಂದ್ರಾಯ ನಮಃ ಓಂ ॥
ಜಯತ್ಯೋಜೋಕ್ಷೀಣ ಸುಖಾತ್ಮ ಬಂಬಃ
ಸ್ವೈಶ್ವರ್ಯ ಕಾಂತಿ ಪ್ರತತಃ ಸದೋದಿತಃ
ಸ್ವಭಕ್ತ ಸಂತಾಪದುರಿಷ್ಟ ಹಂತಾ
ರಾಮಾವತರೋ ಹರಿರೀಶ ಚಂದ್ರಮಾಃ ॥(ಓಂ ರಾಘವಾಯ ನಮಃ ಓಂ)
ಮ.ಭಾ.ತಾ.ನಿ. – 3)

4. ಶ್ರೀಕೃಷ್ಣ ಮಂತ್ರಃ

ಧ್ಯಾಯೇದ್ದರಿರ್ಯಣಿ ನಿಭಂ ಜಗದೇಕವಂದ್ಯಂ
ಸಾಂದರ್ಯಸಾರಮರಿಶಂಖವರಾಭಯಾನಿ ।
ದೋರ್ಭಿರ್ದಧಾನಮಜಿತಂ ಸರಸಂಚ ಭೈಷ್ಮೀ
ಸತ್ಯಾ ಸಮೇತಮಖಿಲ ಪ್ರದಮಿಂದಿ ರೇಶಮ್ ।
ಓಂ ಶ್ರೀ ರುಕ್ಮಿಣಿ ಸತ್ಯಭಾಮಾ ಸಮೇತ ಶ್ರೀ ಕೃಷ್ಣಾಯ ನಮಃ ಓಂ

5. ಶ್ರೀವೇದ ವ್ಯಾಸ ಮಂತ್ರ

ಜ್ಞಾನಾನಂದಪುರಃ ಪೂರ್ಣ ವಿದ್ಮಹೇ ಧೀಮಹೇತಥಾ ।
ತನ್ನಃ ಪ್ರೇರಣ ಮಧ್ಯೇತು ವ್ಯಾಸೂ ಮಂತ್ರಾಧಿಪಾಧಿಪಃ ॥
ಓಂ ಪೂರ್ಣ ಜ್ಞಾನಾಯ ವಿದ್ಯಹೇ ಪೂರ್ಣಾನಂದಾ ಯಧೀಮಹಿ ।
ತನ್ನೊ ವ್ಯಾಸ ಪ್ರಚೋದಯಾತ್ ॥



6. ಶ್ರೀಹಯಗ್ರೀವ ಮಂತ್ರಃ

ವಂದೇ ತುರಂಗ ವದನಂ ಶಶಿ ಬಿಂಬ ಸಂಸ್ಥಂ
ಚಂದ್ರಾವದಾತಮ ಮೃತಾತ್ಮ ಕರೈಃ ಸಮಂತಾತ್ ।
ಅಂಡಾಂತರಂ ಬಹಿರಪಿ ಪ್ರತಿಭಾಸಯಂತಂ ।
ಶಂಖಾಕ್ಷಪುಸ್ತಕ ಸುಭೋದಯುತಾಬ್ಜ ಬಾಹಮ್ ॥

7. ಶ್ರೀ ಪಾಂಡುರಂಗವಿಠಲ ಮಂತ್ರ

ಸಮಚರಣ ಸರೋಜಂ ಸಾಂದ್ರನೀಲಾಂಭುದಾಭಮ್
ಜಘನ ನಿಹಿತಪಾಣಿಂ ಮಂಡನಂ ಮಂಡನಾನಾಮ್ ।
ತರುಣ ತುಲಸಿ ಮಾಲಾ ಕಂಧರಂ ಕಂಜನೇತ್ರಂ
ಸದಯಧವಳ ಹಾಸಂ ವಿಠಲಂ ಚಿಂತಯಾಮಿ ॥



8. ಶ್ರೀ ಧನ್ವಂತರೀ ಮಂತ್ರ

ಸ್ವಯ ಮುದ್ದೇರ್ಯಣಿನ್ ಪೂರ್ವವರ್ಣಪೂರ್ವೋ ನಮೋಯುತಃ ।
ಧಾನ್ವಂತರೋ ಮಹಾಮಂತ್ರಃ ಸಂಸ್ಮೃತಿ ವ್ಯಾಧಿನಾಶನಃ ॥

ಶ್ರೀ ವಾದಿರಜಕೃತ ಧನ್ವಂತರೀಸ್ತುತಿಃ

ಧನ್ವಂತರೇಽಂಗರುಚಿಧನ್ವಂತರೇಽರಿತರುಧನ್ವಂಸ್ತರೀಭವಸುಧಾ
ಭಾನ್ವಂತರಾವಸಥ ಮನ್ವಂತರಾಧಿಕೃತತನ್ವಂತರೌಷಧನಿಧೇ ।
ಧನ್ವಂತರಂಗಶುಗುಧನ್ವಂತಮಾಜಿಷು ವಿತನ್ವನ್ ಮಮಾಬ್ಧಿತನಯಾ
ಸೂನ್ವಂತಕಾತ್ಮಹೃದತನ್ವಂತರಾವಯವತನ್ವಂತರಾರ್ತಿಜಲಧೌ ॥
(ದಶಾವತಾರಸ್ತುತಿ – ೪)



ಶ್ರೀಮತ್ ಭಾಗವತದಲ್ಲಿ ೮ನೇ ಸ್ಕಂಧ ೮೧ರಲ್ಲಿ ಧನ್ವಂತರೀ ಅವತಾರದ ಬಗ್ಗೆ ಹೀಗಿದೆ.

ಅಮೃತಕ್ಕಾಗಿ ದೇವದಾನವರು ಸಮುದ್ರಮಥನ ಮಾಡಿದರು. ಕ್ಷೀರ ಸಮುದ್ರಮಥನ ಕಾಲದಲ್ಲಿ ಕಾಲಕೋಟ ವಿಷವು ಉದ್ಭವವಾಯಿತು. ನಂತರ ಶ್ರೀ ಮಹಾಲಕ್ಷ್ಮಿ ಅವತರಿಸಿದಳು. ಹೀಗೆ ಮತ್ತೆ ಮಥನ ಮಾಡಿದಾಗ ಸಮುದ್ರ ಮಧ್ಯದಿಂದ **ಅಮೃತ** ಕಲಶವನ್ನು ಧರಿಸಿ **ಧನ್ವಂತರಿ**ಯು ಬಂದನು. ಸಾಕ್ಷಾತ್ ಪರಮಾತ್ಮನ ಅವತಾರವೇ ಧನ್ವಂತರೀ ನಾರಾಯಣನೆನಿಸಿದನು.

**ಅಥೋದಧೇರ್ಮಥ್ಯಮಾನಾತ್ ಕಾಶ್ಯಪೈರಮೃತಾರ್ಥಿಭಿಃ ।**
**ಉದಿತಿಷ್ಠನ್ನಮಾರಾಜ ಪುರುಷಃ ಪರಮಾದ್ಭುತಃ ।**
**ದೀರ್ಘಪೀವರದೋರ್ದಂಡಃ ಕಂಬುಗ್ರೀವೋಽರುಣೇಕ್ಷಣಃ ।**
**ಅಮೃತಾ ಪೂರ್ಣ ಕಲಶಂ ಬಿಭ್ರಂದ್ವಲಯ ಭೂಷಿತಃ ।**
**ಸವೈಭಗವತಃ ಸಾಕ್ಷಾದ್ವಿಷ್ಣೋರಂಶಾಂಶ ಸಂಭಾವಃ ।**
**ಧನ್ವಂತರೀರಿತಿ ಖ್ಯಾತ ಆಯುರ್ವೇದದೃಗಿಜ್ಯಭಾಕ್ ॥**

**(ಭಾಗವತ ೮–೮೧)**

ಧನ್ವಂತರೀ ನಾರಾಯಣನಿಂದ ಆಯುರ್ವೇದವು ಭೂಲೋಕದಲ್ಲಿ ಪ್ರಚಾರವಾಯಿತು. **ದೇವತೆಗಳ ವೈದ್ಯ ಧನ್ವಂತರಿ** ಮಂತ್ರ ಪಾರಾಯಣ ಪಠನದಿಂದ ವಿಶೇಷ ಫಲಪ್ರದವಾಗುವುದು.

**ಅಜ್ಞಾನ ದುಃಖ ಭಯರೋಗ ಮಹಾವಿಷಾಣಿ**
**ಯೋಗೋಽಯಮಾಂಶು ವಿನಿಹಂತಿಸುಖಂ ಚದಧ್ಯಾತ್ ।**
**ಉನ್ಮಾದ ವಿಭ್ರಮಹರಃ ಪರತಶ್ಚ ಸಾಂದ್ರ–**
**ಮಾನಂದಮೇವ ಪದಮಾಪಯತಿಸ್ಮನಿತ್ಯಂ ॥**



**ವಿವರಣೆ :** ಅಜ್ಞಾನ, ದುಃಖ, ಭಯ, ರೋಗ ಮಹಾವಿಷಗಳು ಪರಿಹಾರವಾಗಿ ಆನಂದ (ಸುಖ)ವನ್ನು ಕೊಡುವ ಈ ಮಂತ್ರವೆಂಬ ಯೋಗ (ಉಪಾಯ)ದಿಂದಾಗಿ ಮಾನಸಿಕ ಗೊಂದಲಗಳನ್ನೂ ಪರಿಹರಿಸುವುದು. ಅಲ್ಲದೇ ಮುಖ್ಯವಾದ ಪರಮ ಸುಖ ರೂಪ ಮುಕ್ತಿಯು ಲಭಿಸುವುದು. ಇದಕ್ಕೆ ಭಗವಂತನಲ್ಲಿ **ವಿಶೇಷ ಭಕ್ತಿ ಸಹಿತ**ವಾಗಿರಬೇಕು. ಇಂತಹ ಧನ್ವಂತರೀಯ ಕರಗಳಲ್ಲಿ ಅಮೃತವು ಇರುವುದಾಗಿ ಸಾನ್ನಿಧ್ಯವಿದೆ **ಎಂದು ತಿಳಿದವನ ಕೈಯನ್ನು ಯಾರ ಶಿರಸ್ಸಿನ ಮೇಲೆ ಇಡುತ್ತಾನೋ ಆತನು ಸರ್ವ ರೋಗಗಳಿಂದ ದೂರವಾಗಿ ಪಾಪನಿರ್ಮುಕ್ತವಾಗುವುದು.**

**ಶತ ಸಹಸ್ರಮಯುತಂ ಲಕ್ಷಂ ವಾಽಽರೋಗಸಂಕ್ಷಯಾತ್ ।**
**ಇಯಮೇವ ಜಪೇನ್ಮಂತ್ರಂ ಸಾಧೂನಾಂ ದುಃಖಶಾಂತಯೇ ॥**

**ವಿವರಣೆ :** ಧನ್ವಂತರೀ ಮಂತ್ರವನ್ನು ನೂರು, ಸಾವಿರ, ಹತ್ತು ಸಾವಿರ, ಲಕ್ಷ ಸಂಖ್ಯೆಯಲ್ಲಿ ಸಜ್ಜನರ ದುಃಖ ನಿವಾರಣೆಗಾಗಿ ಜಪಿಸಬೇಕು.

**ಜ್ವರದಾಹಾದಿ ಶಾಂತ್ಯರ್ಥಂ ತರ್ಪಯೇನ್ಮನಾಮನಾ ।**
**ದ್ಯಾತ್ವಾಂ ಹರಿಂ ಜಲೇ ಸಪ್ತರಾತ್ರಂ ಜ್ಯೋತಿರ್ವಿನಸ್ಯತಿ ॥**

**ವಿವರಣೆ :** ಜ್ವರ ತಾಪ ಶಾಂತಿಗಾಗಿ ಈ ಮಂತ್ರದಿಂದ **''ಓಂ ಧಂ ಧನ್ವಂತರೇ ನಮಃ ಓಂ''** ಉಚ್ಚರಿಸಿ ಏಳು ದಿನಗಳ ಕಾಲ ನೀರಿನಲ್ಲಿ ಧ್ಯಾನಿಸಿ ಆ ನೀರಿನಿಂದ ತರ್ಪಣ ಕೊಟ್ಟರೆ ಪಾಪವು ಉಪಶಮನವಾಗುವುದು.

ಒಂದು ಮುಖ್ಯ ವಿಷಯ : ಧನ್ವಂತರೀ ನಾರಾಯಣನ ಧ್ಯಾನ ಉಪಾಸನೆ ಮಾಡುವವನು ಪ್ರಥಮತಃ ಜಿತೇಂದ್ರಿಯನಾಗಿ, ನಿಷ್ಕಾಮನಾಗಿ ಶ್ರೀಹರಿಯಲ್ಲಿ ವಿಶೇಷ ಭಕ್ತಿಯುಳ್ಳವನಾಗಿರಬೇಕು. ಭಕ್ತಿಯು ವಿಶೇಷವಾಗಿರಬೇಕು. **''ಯತ್ಕೃತಂತು ಮಯಾದೇವ ತ್ವತ್ಪ್ರಸಾದೇನ ನಾನ್ಯಥಾ''** ಎಂಬುವ ಅನುಸಂಧಾನವಿರಬೇಕೆಂಬುದೇ ಮುಖ್ಯ ತಾತ್ಪರ್ಯ.

## 9. ಶ್ರೀ ಮಹಾಲಕ್ಷ್ಮೀ ಧ್ಯಾನ ಮಂತ್ರ

**ಕೌಶೇಯ ಪೀತವಸನಾಮರವಿಂದ ನೇತ್ರಾಂ ।**
**ಪದ್ಮದ್ವಯಾಭವರೋದ್ಯತ ಪದ್ಮ ಹಸ್ತಾಮ್ ॥**
**ಉದ್ಯಚ್ಛತಾರ್ಕ ಸದೃಶಾಂ ಪರಮಾಂಕಸಂಸ್ಥಾಂ**
**ಧ್ಯಾಯೇದ್ವಿಧೀಶನತ ಪಾದಯುಗಾಂ ಜನಿತ್ರೀಮ್ ॥**

**10. ಮುಖ್ಯಪ್ರಾಣ ಧ್ಯಾನ ಮಂತ್ರ**

**ಉದ್ಯದ್ರವಿಪ್ರಕರಸನ್ನಿಭ ಮಚ್ಯುತಾಂಕೇ**
**ಸ್ವಾಸೀನ ಮಸ್ಯನುತಿ ನಿತ್ಯವಚಃ ಪ್ರವೃತ್ತಿಮ್ ।**
**ಧ್ಯಾಯೇದ್ಗದಾಭಯಕರಂ ಸುಕೃತಾಂಜಲಿಂ ತಂ**
**ಪ್ರಾಣಂ ಯಥೇಷ್ಟ ತನುಮುನ್ನತ ಕರ್ಮಶಕ್ತಿಮ್ ॥**

**ವಿಶೇಷ ಸೂಚನೆ :** ಶ್ರೀಮದಾಚಾರ್ಯರು ರುದ್ರದೇವರಿಗೆ ಧ್ಯಾನ ಪೂಜಾ ಸ್ಥಾನ ಕೊಟ್ಟಿರುವುದರಿಂದ ವೈಷ್ಣವರು ಪಾರ್ವತೀಪತಿ ರುದ್ರದೇವರನ್ನು ತಾರತಮ್ಯ ಪ್ರಕಾರ ಧ್ಯಾನ ಮಾಡಿ ರುದ್ರಾಂತರ್ಗತ ಶ್ರೀ ಸಂಕರ್ಷಣನನ್ನು ಸ್ಮರಿಸಬೇಕೆಂದು ತಿಳಿಸಿರುತ್ತಾರೆ. ವೈಷ್ಣವರು ರುದ್ರದೇವರನ್ನು ಪೂಜಿಸುವುದಿಲ್ಲವೆಂಬ ತಪ್ಪು ಕಲ್ಪನೆಯನ್ನು ನಿವಾರಣ ಮಾಡಿರುತ್ತಾರೆ.

**10. ರುದ್ರ (ಶಿವ) ಧ್ಯಾನ ಮಂತ್ರ**

**ಧ್ಯೆಯಃ ಪಂಚಮುಖೋ ರುದ್ರಃ ಸ್ಫಟಿಕಾಮಲಕಾಂತಿಮಾನ್**
**ವಿದ್ಯುಚ್ಚ ಭ್ರಾಸಿತರಜಃ ಶ್ಯಾಮಾನ್ಯಸ್ಯ ಮುಖಾನಿಚ ।**
**ಜಟಾವ ಬದ್ಧೆಂದು ಕಲಃ**

ಇನ್ನು ಗರುಡ, ಶೇಷ, ಸ್ಕಂದ, ಗಣಪತಿ ಸೂರ್ಯ ಮಂತ್ರಗಳನ್ನೂ ತಿಳಿಸಿ ಶ್ರೀಮನ್ನಾರಾಯಣನನ್ನಷ್ಟೇ ಅಲ್ಲದೆ, ಶ್ರೀಹರಿಯ ಪರಿವಾರ ದೇವತೆಗಳನ್ನು ಧ್ಯಾನೋಪಾಸನೆ ಮಾಡಬೇಕೆಂದು ಆಜ್ಞಾಪಿಸಿರುತ್ತಾರೆ. ಈ ರೀತಿಯಾಗಿ ತಾರತಮ್ಯೋಪೇತವಾಗಿ ಉಪಾಸನಾದಿಗಳನ್ನು ಸಜ್ಜನರು ಅವಶ್ಯ ಮಾಡಿ ಭಗವತ್ಪ್ರಸಾದಕ್ಕೆ ಭಾಗಿಗಳಾಗಬೇಕೆಂಬುದೇ ಒಟ್ಟು ತಾತ್ಪರ್ಯ.

ಮಂತ್ರಗಳ ಧ್ಯೇಯಮೂರ್ತಿ ಗುರುಪದೇಶವಾಗಿದ್ದರೆ ಹೆಚ್ಚು ಫಲದಾಯಕವೆಂದು ತಿಳಿಸುತ್ತಾರೆ.

**ಸರ್ವೇಷ್ವಪಿ ಹಿ ಮಂತ್ರೇಷು ದ್ವ್ಯಾದ್ಯನಂತಾಂತ ಬಾಹುಕಃ ।**
**ಚೇತನಾಂತಸ್ಥಮಾರಭ್ಯ ಸರ್ವಗಾಂತ ಸ್ವರೂಪವಾನ್ ॥**
**ಅನಂತರೂಪೋ ಧ್ಯೇಯೋಽತಃ ಸ್ವಗುರೂಕ್ತ್ಯಾನು ಸಾರತಃ ।**
**ಯಥಾಯೋಗ್ಯಂ ಯಥಾಶಕ್ತಿ ತತ್‌ದಾಯುಧ ಭೂಷಣಃ ॥**

**ವಿವರಣೆ :** ಎಲ್ಲಾ ಮಂತ್ರಗಳಲ್ಲಿ ಎರಡರಿಂದ ಹಿಡಿದು ಅನಂತಾನಂತ ಬಾಹುಗಳಿರುವುದಾಗಿ ಧ್ಯಾನ ಮಾಡಬೇಕು. ಅಣುರೂಪದಿಂದ ಸರ್ವಚೇತನದ ಅಂತರ್ಯಾಮಿಯಾಗಿ ಎಲ್ಲಾ ಕಡೆ ವ್ಯಾಪ್ತನಾಗಿರುವ ಬೃಹದ್ರೂಪದ ತನಕ ಅನಂತ ಭಗವದ್ರೂಪಗಳನ್ನು ಚಿಂತಿಸಬೇಕು. ಇಷ್ಟೊಂದು ದೀರ್ಘ ಧ್ಯಾನ ಬ್ರಹ್ಮ ಮುಖ್ಯ



ಪ್ರಾಣವೇ ಮುಖ್ಯ ಅಧಿಕಾರಿಗಳು. ಆದರೂ ಹರಿಭಕ್ತರಾದ ನಾವು ಅಲ್ಪರು. ನಮಗೆ ಶಕ್ತಿ ಇದ್ದಷ್ಟು ನಮ್ಮ ಯೋಗ್ಯತೆಗೆ ಅನುಗುಣವಾಗಿ ಗುರೂಪದೇಶ ಪಡೆದು ಶ್ರೀ ರಮೇಶನು ಉಚಿತ ಆಯುಧಗಳಿಂದ ಅಲಂಕೃತನಾಗಿರುವ ಭಗವದ್ರೂಪವನ್ನು ಧ್ಯಾನಿಸಬೇಕೆಂದು ಆಚಾರ್ಯ ಶ್ರೀಮಧ್ವರು ತಿಳಿಸುತ್ತಾರೆ.

ಶ್ರೀಮದಾಚಾರ್ಯರು ರಚಿಸಿರುವ ಈ ತಂತ್ರಸಾರ ಸಂಗ್ರಹದಲ್ಲಿ ತಿಳಿಸದೇ ಇರುವ ವಿಷಯವಿರುವುದಿಲ್ಲ. ಈ ಒಂದು ತಂತ್ರಸಾರ ಸಂಗ್ರಹವು ವಿಶ್ವಕೋಶವೇ ಆಗಿರುತ್ತದೆ.

ನಮಗೆ ಈವರೆಗೂ ಮುಂದೆಯೂ ಒಳ್ಳೆಯದಾಗಬೇಕಾದರೆ, ಗುರುದೇವತೆಗಳು ತೋರಿಸಿದ ಕರುಣೆಯ ಫಲವೇ ಆಗಿರುತ್ತದೆ.

**ಶುಭಾನ್ ಧ್ಯಾಯಂತಿ ಯೇ ಕಾಯಾನ್ ಗುರುದೇವ ಪ್ರಸಾದ ಜಾನ್ ।**
**ಇತರಾನಾತ್ಮ ಪಾಪೇ ಪೋತ್ಥಾಂ ಸ್ತೋತ್ರಾಂ ವಿದ್ಯಾ ಫಲಿಷ್ಯತಿ**
**ಸತತಂ ಶಾಸ್ತ್ರ ವಿಮರ್ಶೇನ ಭವ್ಯಿತಿ**
**ಪರಮ ಸ್ನೇಹ ಸಂಯುಕ್ತ ಯಥಾರ್ಥ ಜ್ಞಾನತೇ ಭವೇತ್ ।**
**ಸಾ ಭಕ್ತಿಂತಿ ವಿಜ್ಞಾಯಾ ಸಾಧನಂ ಭೋಗ ಮೋಕ್ಷ ಯೋಃ ॥**

**ವಿವರಣೆ :** ಸಮಯವಿದ್ದಾಗ ಒಮ್ಮೆಯಾದರೂ, ಅಥವಾ ಯಾವಾಗಲಾದರೂ ಸ್ವಲ್ಪ ವಿಶ್ರಾಂತಿ ಪಡೆದ ನಂತರ ಶ್ರೀಹರಿ ಚಿಂತನೆಯನ್ನು **ಧಾರಣವೆಂತಲೂ** ಇಂಥದೇ ಚಿಂತನೆಯು ನಿರಂತರ ಸಾಗಿದರೆ **ಧ್ಯಾನವೆಂತಲೂ** ನಿರಾಯಾಸವಾಗಿ ಸದಾ ಎಲ್ಲಿ ಹೇಗೆಬೇಕಾದರೂ ಧ್ಯಾನಿಸುವಾಗ ಏಕಾಗ್ರತೆ **ಸಿದ್ಧಿ, ಸಮಾಧಿ ಎನ್ನಲಾಗಿದೆ.** ಇಂತಹ ಸಮಾಧಿ ಪಕ್ವವಾದಾಗ ಮಾತ್ರ ಶ್ರೀಹರಿಯ ದಿವ್ಯ ದರ್ಶನವಾಗುವುದು. ಶಾಸ್ತ್ರಾಧ್ಯಯನ ಅವಲೋಕನೆಯಿಂದಲೂ ಭಗವದ್ದರ್ಶನವಾಗುವುದು. ಇದನ್ನು ಶಾಸ್ತ್ರಾಪರೋಕ್ಷವೆನ್ನಲಾಗಿದೆ. ಧ್ಯಾನ ಧಾರಣೆಗಳಿಗಿಂತ ಶಾಸ್ತ್ರಾಪರೋಕ್ಷ ಪರಮಶ್ರೇಷ್ಠ. ಕಾರಣ ಶಾಸ್ತ್ರಪರ್ಯಾಲೋಚನೆಯು ಯಥಾರ್ಥ ಜ್ಞಾನಕ್ಕೆ ಹೇತುವಾಗುವುದು. ತಸ್ಮಾತ್ ಇಂಥಾದ್ದನ್ನು **ಭಕ್ತಿ** ಎನ್ನುವರು. ಇದೇ ಮೋಕ್ಷಕ್ಕೆ ಉಪಾಯವಾಗುವುದು.

**ನಿರ್ದೋಷಾಖಿಲ ಸಂಪೂರ್ಣ ಗುಣೇನ ಹಿರಿಣಾಸ್ವಯಮ್ ।**
**ಬ್ರಹ್ಮಣೇ ಕಥಿತಾತ್ತಂತ್ರಸಾರ ದುರ್ದುಧೃತ್ಯ ಸಾದರಮ್ ।**
**ಆನಂದತೀರ್ಥ ಮುನಿನಾ ಕೃತೋ ಗ್ರಂಥೋಯಮಂಜಸಾ ।**
**ಗ್ರಂಥೋಽಯಂ ಪಾಠ ಮಾತ್ರೇಣ ಸಕಲಾಭೀಷ್ಟಸಿದ್ಧಿದಃ**
**ಕಿಮು ಜ್ಞಾನಾದನುಷ್ಠಾನಾದುಭಯಸ್ಮಾ ತ್ಪುನಃ ಕಿಮು ॥ (163)**

ಈ ಗ್ರಂಥ ಪಠಣದಿಂದಲೇ ಸಕಲ ಅಭೀಷ್ಟಗಳು ಸಿದ್ಧಿಸುವುದು. ಅಂದಮೇಲೆ

ಇದರ ಅರ್ಥಾನು ಸಂಧಾನದಿಂದ ಲಭಿಸುವ ಮಹತ್ವವು ಇನ್ನು ಅನುಷ್ಠಾನ ಮಾಡಿದ ಶ್ರೇಷ್ಠ ಮಹಾನುಭಾವನು ಎಂಥ ಭಾಗಶಾಲಿ ಎಂದು ಪ್ರತ್ಯೇಕ ಹೇಳಬೇಕಾದ್ದಿಲ್ಲ. ಶ್ರೀಮದಾಚಾರ್ಯರು ಅನುಷ್ಠಾನ, ಧ್ಯಾನ, ಅರ್ಥಜ್ಞಾನದಿಂದ ವಿಶಿಷ್ಟ ಫಲವಿರುವುದೆಂದು ಜ್ಞಾನಕ್ಕೆ ಸರಿಸಮಾನವಾದದ್ದು ಹರಿಪ್ರಸಾದಕ್ಕೆ ಬೇರೆ ಮಾರ್ಗವೇ ಇರುವುದಿಲ್ಲ. **ನಾನ್ಯಃ ಪಂಥ ಅಯನಾಯ ವಿದ್ಯತೆ** ಎಂಬ ಉಪನಿಷತ್ ವಾಕ್ಯವನ್ನು ಮಾರ್ಮಿಕವಾಗಿ ತಿಳಿಸಿ ಉದ್ಧಾರ ಮಾಡಿದ ಶ್ರೀಮದಾನಂದತೀರ್ಥರಿಗೆ ಅನಂತಾನಂತ ಶಿರಸಾಷ್ಟಾಂಗ ನಮಸ್ಕಾರವು.

ತಂತ್ರಸಾರ ಸಂಗ್ರಹ ಗ್ರಂಥ ಮುಗಿಸಿ ಐದು ಶ್ಲೋಕಗಳಿಂದ ಉಪಸಂಹಾರ ಮಾಡುತ್ತಾರೆ. ಭಕ್ತಿಯೇ ಮುಖ್ಯ ಸಾಧನೆ. ಅದು ಇಲ್ಲದೆ ತಾಂತ್ರಿಕವಾಗಿ ಮಾಡುವುದು ವ್ಯರ್ಥವೇ ಸರಿ. ಭಕ್ತಿಯೇ ಸರ್ವಾಭೀಷ್ಟದಾಯಾಕ, ಮುಕ್ತಿದಾಯಕವಾದದ್ದು. ಭಕ್ತಿ ಹೊರತು ಬೇರೆ ಯಾವುದರಿಂದಲೂ ಲಭಿಸದು. ತಿರುಪತಿಗೆ ಹೋಗುತ್ತೇವೆ ಶ್ರೀ ವೆಂಕಟೇಶನ ದರ್ಶನಕ್ಕಾಗಿ. ಅಲ್ಲಿ ಶ್ರೀಶನನ್ನು ಭಕ್ತಿಯಿಂದ ಒಂದು ಕ್ಷಣ ಕಂಡರೆ ಅಷ್ಟೇ ಸಾಕು. ಗಂಟೆಗಟ್ಟಲೆ ಪ್ರತಿಮೆಯನ್ನು ಭಕ್ತಿರಹಿತವಾಗಿ ನೋಡುವುದು ವ್ಯರ್ಥ.

**ಆನಂದಚಿತ್ಸದಿತಿಪೂರ್ವಗುಣೈಃ ಸಮಸ್ತೈಃ**
**ಮರ್ತ್ಯಾದಿಭಿರ್ವಿಧಿ ಪರ್ಯೈರ್ಭಗವಾನ್ಕ್ರಮೇಣ**
**ಧ್ಯಾತೋಽಧಿಕೈರಧಿಗುಣೋಽಧಿಕಮೇವ ಸೌಖ್ಯಂ**
**ಮಕ್ತೌ ದದಾತಿ ಸತತಂ ಪರಮಸ್ವರೂಪಃ**
**ನಿರ್ದೋಶಾಖಿಲಸಂಪೂರ್ಣಗುಣೇನ ಹರಿಣಾ ಸ್ವಯಮ್ ।**
**ಬ್ರಹ್ಮಣೇ ಕಥಿತಾ ತಂತ್ರಸಾರಾದುದ್ಭೃತ್ಯ ಸಾದರಮ್ ।**
**ಆನಂದತೀರ್ಥಮುನಿನಾ ಕೃತೋ ಗ್ರಂಥೋಽಯಮಂಜಸಾ ॥**
**ಗ್ರಂಥೋಽಯಂ ಪಾಠಮಾತ್ರೇಣ ಸಕಲಾಭೀಷ್ಟಸಿದ್ಧಿದಃ**
**ಕಿಮು ಜ್ಞಾನಾದನುಷ್ಠಾನಾದುಭಯಸ್ಮಾತ್ಪುನಃ ಕಿಮು ॥**

ಶ್ರೀಮದಾಚಾರ್ಯರು ತಮ್ಮ ಮೂಲ ರೂಪತ್ರಯಗಳನ್ನು ತಿಳಿಸುತ್ತಾರೆ.

**ಯಸ್ಯತ್ರೀಣ್ಯುದಿತಾನಿ ವೇದವಚನೇ ರೂಪಾಣಿ ದಿವ್ಯಾನಲಂ ।**
**ಬಟ್ ತದ್ದರ್ಶತ ಮಿತ್ಥಮೇವ ನಿಹಿತಂದೇವಸ್ಯ ಭಾರ್ಗೋ ಮಹತ್।**
**ವಾಯೋ ರಾಮವಚೋನಯಂ ಪ್ರಥಮಕಂ ಪೃಕ್ಷೋ ದ್ವಿತೀಯಂ ವಪುಃ**
**ಮಧ್ವೋಯತ್ತು ತೃತೀಯ ಮೇತದಮುನಾ ಗ್ರಂಥಃ ಕೃತಃ ಕೇಶವೇ ॥**

**ಅಶೇಷ ದೋಷೋಜ್ಝಿತ ಪೂರ್ಣ ಸದ್ಗುಣಂ**
**ಸದಾ ವಿಶೇಷಾವಗತೋರುರೂಪಮ್ ॥**



**ನಮಾಮಿ ನಾರಾಯಣಮಪ್ರತೀಪಂ**
**ಸದಾ ಪ್ರಿಯೇಭ್ಯಃ ಪ್ರಿಯಮಾದರೇಣ ॥**

ಯಾವುದನ್ನು ಬರೆಯಬೇಕು ಏನನ್ನು ನಿರೂಪಿಸಬೇಕು ಎಂಬುದು ತಿಳಿಯದೇ ದಿಙ್ಮೂಢನಾಗಿ ನನ್ನ ಶಕ್ತ್ಯಾನುಸಾರ ಅತಿ ಸಂಕ್ಷಿಪ್ತವಾಗಿ ಬರೆದಿದ್ದೇನೆ. ಸಮುದ್ರಕ್ಕೆ ಹೋಗಿ ಸಮುದ್ರ ಸ್ನಾನ ಮಾಡಿದೆ ಎಂದು ಹೇಳಿಕೊಂಡಂತೆ ತಂತ್ರಸಾರ ಸಂಗ್ರಹವೆಂಬ ಸಾಗರದಿಂದ ತಿಳಿದಷ್ಟು ಬರೆಯಲಾಗಿದೆ. ಭಗವದ್ಭಕ್ತರು ಈ ಕಿರು ನಿರೂಪಣೆಯನ್ನು ಸ್ವೀಕರಿಸಿ ಶ್ರೀಮದಾನಂದತೀರ್ಥರ ಆರಾಧ್ಯಮೂರ್ತಿ ಶ್ರೀವೇಣುಗೋಪಾಲಕೃಷ್ಣನ ಕೃಪೆಗೆ ಪಾತ್ರನಾಗುವಂತೆ ನನ್ನನ್ನು ಪಾತ್ರನನ್ನಾಗಿ ಮಾಡಿ ಆಶೀರ್ವದಿಸಿದರೆ ನನ್ನ ಈ ಶ್ರಮಕ್ಕೆ ಸಾರ್ಥಕತೆ ಬರುವುದು.

**ಇತ್ಯಾದಿಬಹುವಿಸ್ತಾರೋ ತಂತ್ರಸಾರಸಂಗ್ರಹ ವಿಷಯಾಃ ।**
**ಗ್ರಂಥ ಗೌರವ ಭಯಾಸಂಕ್ಷೇಪೇಣ ನಿರೂಪಿತಾ ॥**
**ವಿದ್ವನ್ಮಣಿ ಘೂಳೀ ಕೃಷ್ಣಮೂರ್ತ್ಯಾ ಸುತೋ**
**ಬದರೀನಾಥೇನ ಯದ್ಲಿಖಿತಂ ತೇನ ಮಾಧವ ಮಧ್ವಯೋಃ ಪ್ರೀತುರ್ಭವತು॥**

**ಸಂಗ್ರಹ – ನಿರೂಪಣೆ**
**ಪ್ರೊ॥ ಬದರೀನಾಥಾಚಾರ್ ಘೂಳಿ,** ಎಂ.ಎ.
ನಿವೃತ್ತ ಪ್ರಾಧ್ಯಾಪಕರು